ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಕಲಬುರಗಿ

ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಡಾ. ಶಂಭುಲಿಂಗ ಎಸ್. ವಾಣಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**KALABURAGI:** An Introducing Book on the Places in Karnataka that Played a Major Role in the Freedom Struggle, Written by Dr. Shambhulinga S. Vani, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಶಂಭುಲಿಂಗ ಎಸ್. ವಾಣಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಸ್ಥಳಗಳ ಕುರಿತು ಕಿರುಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನ ಹಾಕಿಕೊಂಡಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉದ್ದೇಶ ನಿಜವಾಗಿಯು ಶ್ಲಾಘನೀಯವಾದದ್ದು, ಅದರಲ್ಲಿ ನನಗೆ "ಕಲಬುರಗಿ" ಸ್ಥಳದಲ್ಲಿ ನಡೆದ ಹೋರಾಟ ಕುರಿತು ಬರೆಯುವ ಕಾರ್ಯ ವಹಿಸಿರುವುದು ನನ್ನ ಸುದೈವ ಎಂದು ನಾನು ತಿಳಿದುಕೊಂಡಿದ್ದೇನೆ. ಸ್ಥಳಿಯ ಇತಿಹಾಸ ಬರೆದರೆ ಅದು ವಸ್ತುನಿಷ್ಠ ಮತ್ತು ವಿಷಯ ನಿಷ್ಠವಾಗಿರುತ್ತದೆ ಎನ್ನುವುದು ನನ್ನ ಅಭಿಮತ. ಸ್ವಾತಂತ್ರ್ಯ ಹೋರಾಟ ನಾನು ಕಣ್ಣಾರೆ ಕಾಣದಿದ್ದರೂ, ಅದರ ಕುರಿತು ಹಲವು ಗ್ರಂಥಗಳನ್ನು ಅಧ್ಯಯನ ಮಾಡಿ, ಕಲಬುರಗಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕುರಿತು ಈ ಕಿರು ಹೊತ್ತಿಗೆಯನ್ನು ಸಿದ್ಧಪಡಿಸಿದ್ದೇನೆ. ಪ್ರಸ್ತುತ ಯವಕರಿಗೆ ಸ್ವಾತಂತ್ರ್ಯ ಹೋರಾಟದ ಮಾಹಿತಿ ಒದಗಿಸುವುದು ಅತಿ ಅವಶ್ಯವಾಗಿದೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹಳ್ಳಿಯಿಂದ ದಿಲ್ಲಿಯವರೆಗಿನ ಹಲವು ನಾಯಕರು ತಮ್ಮ ಸರ್ವಸ್ವವನ್ನೇ ಮುಡುಪಾಗಿಟ್ಟು, ಸಂದರ್ಭ ಬಂದಾಗ ತಮ್ಮ ಪ್ರಾಣವನ್ನೇ ದೇಶದ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿರುವುದು ಇಂದಿನ ಯುವಕರಿಗೆ ತಿಳಿಸುವ ಅಕಾಡೆಮಿಯ ಯೋಜನೆ ಸಕಾರಾತ್ಮಕವಾಗಿದೆ.

ನಮ್ಮ ಗ್ರಾಮೀಣ ಪ್ರದೇಶದ ಹಲವು ದೇಶಭಕ್ತರು ತಮ್ಮನ್ನು ತಾವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ತೊಡಗಿಸಿಕೊಂಡರು. ಅವರ ತ್ಯಾಗ ಬಲಿದಾನದ ಪ್ರಯುಕ್ತ ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ ಎನ್ನುವುದು ಇಂದಿನ ಹಾಗೂ ಮುಂದಿನ ಪೀಳಿಗೆಗೆ ತಿಳಿಸುವ ಉದ್ದೇಶ ಕನ್ನಡ ಸಾಹಿತ್ಯ ಅಕಾಡೆಮಿ ಹೊಂದಿರುವುದು ಈ ಯೋಜನೆಯಿಂದ ಕಂಡುಬರುತ್ತದೆ. ಹಲವು ಪ್ರದೇಶಗಳ ಹಾಗೂ ವ್ಯಕ್ತಿಗಳ

ಚರಿತ್ರೆ ಬೆಳಕಿಗೆ ಬಂದಿರುವುದಿಲ್ಲ. ಇಂತಹ ಯೋಜನೆಗಳಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ ಪ್ರತಿಯೊಬ್ಬ ವ್ಯಕ್ತಿ ಹಾಗೂ ಸ್ಥಳಗಳ ಕುರಿತು ಮಾಹಿತಿ ಸಂಗ್ರಹಿಸುವುದು ತುಂಬಾ ಕಷ್ಟಕರವಾಗಿದೆ. ಆದರೂ ನಿರಂತರ ಪ್ರಯತ್ನದಿಂದ ನನಗೆ ನೀಡಿದ ಅವಧಿಯಲ್ಲಿ ಈ ಕಿರುಹೊತ್ತಿಗೆಯ ವಿಷಯವನ್ನು ಸಾದರಪಡಿಸಿದ್ದೇನೆ.

ಮೊತ್ತೊಮ್ಮೆ ಕರ್ನಾಟಕದ ಸಾಹಿತ್ಯ ಅಕಾಡೆಮಿಯ ಸರ್ವ ಪದಾಧಿಕಾರಿಗಳಿಗೂ ಹಾಗೂ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಸಹಕರಿಸಿದ ಪ್ರತಿಯೊಬ್ಬರಿಗೂ ಕೃತಜ್ಞನಾಗಿದ್ದೇನೆ.

**– ಡಾ. ಶಂಭುಲಿಂಗ ಎಸ್. ವಾಣಿ**
ಕಲಬುರಗಿ

## ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಸ್ವಾತಂತ್ರ್ಯ ಹೋರಾಟದಲ್ಲಿ ಕಲಬುರಗಿ ೧೫
ಸ್ವದೇಶಿ ಚಳುವಳಿ (ಕ್ರಿ. ಶ. ೧೯೦೫) ೧೮
ಅಸಹಕಾರ ಚಳವಳಿ (ಕ್ರಿ. ಶ. ೧೯೨೨) ೨೩
ಆರ್ಯ ಸಮಾಜದ ಪಾತ್ರ: ೨೮
ಸತ್ಯಾಗ್ರಹ ಚಳುವಳಿ (ಕ್ರಿ. ಶ. ೧೯೩೮) ೩೧
ವಂದೇ ಮಾತರಂ ಚಳುವಳಿ ೩೫
ವಂದೇ ಮಾತರಂ ಚಳುವಳಿಯಗಾರರು ೪೦
ಕ್ವಿಟ್ ಇಂಡಿಯಾ ಚಳುವಳಿಯ ಪ್ರಭಾವ ೪೨
ಸಂಘ–ಸಂಸ್ಥೆಗಳ ಪಾತ್ರ ೪೩
ಕ್ರಿ. ಶ. ೧೯೪೭ ಆಗಸ್ಟ್ ೧೫ ರಂದು ಕಲಬುರಗಿಯಲ್ಲಿ ನಡೆದ ಧ್ವಜಾರೋಹಣ ಸಮಾರಂಭ ೪೫
ಕಲಬುರಗಿ ಸ್ವಾತಂತ್ರ್ಯ ಹೋರಾಟಗಾರರು ೪೮

| | |
|---|---|
| ಪೂಜ್ಯ ದೊಡ್ಡಪ್ಪ ಅಪ್ಪಾ: | ೪೯ |
| ಕಲಬುರಗಿಯಲ್ಲಿ ಗಾಂಧೀಜಿಯವರು ಮಾಡಿದ ಭಾಷಣದ ವಿವರ | ೫೧ |
| ವರದಿಯು ಹೀಗೆ ನುಡಿಯಿತು | ೫೨ |
| ಉಭಯ ಕೋಮುಗಳಿಗೆ ಮನವಿ | ೫೨ |
| ಜನಾರ್ದನರಾವ್ ದೇಸಾಯಿ | ೫೩ |
| ಸ್ವಾಮಿ ರಮಾನಂದ ತೀರ್ಥ | ೫೪ |
| ಅನಂತಶರ್ಮ | ೫೫ |
| ಚನ್ನಬಸಪ್ಪ ಕುಳಗೇರಿ | ೫೫ |
| ನಾರಾಯಣರಾವ್ ಕಾನಿಹಾಳ್ | ೫೬ |
| ವಿದ್ಯಾಧರ ಗುರೂಜಿ | ೫೭ |
| ರಾ. ಗು. ಜೋಷಿ | ೫೮ |
| ವಿ. ಪಿ. ದೇವಳ್ಗಾಂವಕರ | ೫೮ |
| ಜಗನ್ನಾಥರಾವ್ ಚಂದ್ರಿಕೆ | ೫೯ |
| ಕಕ್ಕೇರಿ ಹನುಮಂತರಾಯರು | ೫೯ |
| ಶ್ರೀ ಪಿ. ವಿ. ಕುಲಕರ್ಣಿ | ೬೦ |
| ಆಕರ ಗ್ರಂಥಗಳು | ೬೧ |
| • ಅನುಬಂಧ ಛಾಯಾಚಿತ್ರಗಳು | ೬೩ |
| • ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೯ |


# ಸ್ವಾತಂತ್ರ್ಯ ಹೋರಾಟದಲ್ಲಿ ಕಲಬುರಗಿ

ಕಲಬುರಗಿ ಅಥವಾ ಗುಲಬರ್ಗಾ ಎಂದು ಪರ್ಯಾಯ ಹೆಸರುಗಳಿಂದ ಚರಿತ್ರೆಯಲ್ಲಿ ಗುರುತಿಸಿಕೊಂಡಿರುವ ಈ ನಗರವು ಪ್ರಾಚೀನ ಪರಂಪರೆ ಮತ್ತು ಇತಿಹಾಸವನ್ನು ಹೊಂದಿದೆ. ಇತಿಹಾಸ ಪೂರ್ವಕಾಲದಿಂದ ಹಿಡಿದು ಕ್ರಿ. ಶ. ೧೯೪೮ರವರೆಗೆ ಹಲವು ರಾಜಕೀಯ ಮನೆತನಗಳು ಈ ಜಿಲ್ಲೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಳ್ವಿಕೆ ಮಾಡಿವೆ. ಮೌರ್ಯ, ಶಾತವಾಹನ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ ಹಾಗೂ ಕಲಚೂರಿಯರು, ವಿಜಯನಗರ ಅರಸರು, ಬಹಮನಿ ಸುಲ್ತಾನರು, ಆದಿಲ್ ಷಾಹಿಗಳು ಹಾಗೂ ನಿಜಾಮಷಾಹಿಗಳು ಈ ಪ್ರದೇಶದಲ್ಲಿ ನೇರವಾಗಿ ಆಳ್ವಿಕೆ ಮಾಡಿ, ಇಲ್ಲಿಯ ಇತಿಹಾಸ ಮತ್ತು ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಕಲಬುರಗಿಯು ನೈಸರ್ಗಿಕವಾದ ಖನಿಜ ನಿಕ್ಷೇಪಗಳು, ಜಲಸಂಪನ್ಮೂಲಗಳು, ಫಲವತ್ತಾದ ಭೂಮಿಯನ್ನು ಈ ಜಿಲ್ಲೆಯು ಹೊಂದಿದೆ. ಇಲ್ಲಿ ಹರಿಯುವ ಭೀಮಾ ನದಿ, ಅಮರ್ಜಾ ನದಿ, ಕಾಗಿಣಾ ನದಿ ಮುಲ್ಲಾಮಾರಿ, ಬೆಣ್ಣೆತೋರಾ, ಬೋರಿ ನದಿಗಳು ಹಾಗೂ ದೊಡ್ಡ ದೊಡ್ಡ ಹಳ್ಳಗಳು ಜಿಲ್ಲೆಗೆ ನೈಸರ್ಗಿಕ ಕೊಡುಗೆಗಳಾಗಿವೆ.

ಕಲಬುರಗಿ ಜಿಲ್ಲೆಯು ಮೊದಲು ಹತ್ತು ತಾಲೂಕುಗಳನ್ನು ಒಳಗೊಂಡಿತ್ತು. ಆದರೆ ಕ್ರಿ. ಶ. ೨೦೧೬ರಲ್ಲಿ ಈ ಜಿಲ್ಲೆಯನ್ನು ವಿಭಜನೆ ಮಾಡಿ, ಯಾದಗಿರಿಯನ್ನು ಜಿಲ್ಲಾ ಕೇಂದ್ರವಾಗಿ ಸರಕಾರ ಘೋಷಣೆ ಮಾಡಿರುವ ಪ್ರಯುಕ್ತ ಶಹಾಪೂರ, ಸುರಪುರ, ತಾಲೂಕುಗಳನ್ನು ಯಾದಗಿರಿಗೆ ಸೇರಿಸಲಟ್ಟವು. ಕಲಬುರಗಿ ಜಿಲ್ಲೆಯು ಆಳಂದ, ಅಫಜಲ್ಪುರ, ಜೇವರ್ಗಿ, ಚಿತ್ತಾಪೂರ, ಸೇಡಂ, ಚಿಂಚೋಳಿ ತಾಲೂಕುಗಳನ್ನು ಒಳಗೊಂಡಿದೆ. ಕ್ರಿ.ಶ. ೨೦೧೯–೨೦ರಲ್ಲಿ ಕರ್ನಾಟಕ ಸರಕಾರ ಕಮಲಾಪುರ, ಕಾಳಗಿ ಹಾಗೂ ಯಡ್ರಾಮಿಗಳನ್ನು ತಾಲೂಕು ಕೇಂದ್ರಗಳಾಗಿ ಮಾಡಿ ಆದೇಶ ಹೊರಡಿಸಿತು. ಹೀಗಾಗಿ ಮತ್ತೆ ಕಲಬುರಗಿ ಜಿಲ್ಲೆಯು ಹತ್ತು ತಾಲೂಕುಗಳನ್ನು ಒಳಗೊಂಡ ಜಿಲ್ಲಾ ಕೇಂದ್ರವಾಗಿದೆ.

ಔರಂಗಜೇಬನ ದಂಡನಾಯಕನಾದ ಗಾಜಿಯೋದ್ದೀನ್‌ಖಾನನು ಆತನ ನಿಧನದ ನಂತರ ಮೊಗಲ್ ಸಾಮ್ರಾಟನಾದ ಫರೂಕ್‌ಶಿಯಾರನು ಮೀರ ಕಮರುದ್ದೀನ್ (ಗಾಜಿಯೊದ್ದೀನನ ಮಗ)ನನ್ನು ಕ್ರಿ.ಶ. ೧೭೧೩ರಲ್ಲಿ ದಕ್ಷಿಣದ ಸುಭೇದಾರನನ್ನಾಗಿ ನೇಮಕ ಮಾಡಿ ಆತನಿಗೆ ನಿಜಾಮ್–ಉಲ್–ಮುಲ್ಕ್ ಫಿರೋಜ್ ಜಂಗ್ ಎಂಬ ಬಿರುದು ನೀಡಿದನು. ನಂತರ ಅಧಿಕಾರಕ್ಕೆ ಬಂದ ಮೊಗಲ್ ಅರಸ ಮಹಮ್ಮದ ಶಹಾನು ಈತನಿಗೆ ಅಸಫ್‌ಝಾ ಎಂಬ ಬಿರುದು ನೀಡಿದ. ಇದರಿಂದ ಅವರ ಮನೆತನಕ್ಕೆ ಅಸಾಫ್‌ಝಾ ಎಂದು ಹೆಸರು ಬಂದಿತು. ಆದ್ದರಿಂದ ನಿಜಾಮರು ಆಸಾಫ್‌ಝಾ ಮನೆತನದವರೆಂದು ಹೇಳಲಾಗಿದೆ. ಕ್ರಿ. ಶ. ೧೭೨೪ರಲ್ಲಿ ಇವರು ಮೊಗಲರಿಂದ ಸಂಪೂರ್ಣವಾಗಿ ಮುಕ್ತರಾದರು. ಕ್ರಿ. ಶ. ೧೮೫೭ರ ನಂತರ ಬಂದ ನಿಜಾಮರು ಬ್ರಿಟಿಷರ ಆಡಳಿತದಲ್ಲಿದ್ದು ಅವರ ಆದೇಶದಂತೆ ರಾಜ್ಯಭಾರ ಮಾಡಿದರು. ಕ್ರಿ. ಶ. ೧೭೨೪–೧೯೪೮ರವರೆಗೆ ಒಟ್ಟು ಏಳು ಜನ ನಿಜಾಮರು ಅಧಿಕಾರ ಮಾಡಿದರು. ಈ ಎಲ್ಲಾ ನಿಜಾಮರು ಬ್ರಿಟಿಷರ ಅಂಕಿತಕ್ಕೆ ಒಳಪಟ್ಟು ಅವರ ಆದೇಶಕ್ಕೆ ಬದ್ಧರಾಗಿದ್ದುಕೊಂಡು ಅಧಿಕಾರ ಮಾಡಿದರು.

ಬಿಜಾಪುರದ ಆದಿಲ್‌ಷಾಹಿಗಳು ಅವನತಿ ಹೊಂದಿದ ನಂತರ ಈ ಭಾಗದಲ್ಲಿ ಕೆಲವು ಸಣ್ಣಪುಟ್ಟ ಮನೆತನಗಳು ಸ್ವಾತಂತ್ರ್ಯ ಹೊಂದಿದವು. ಅವುಗಳನ್ನು ನಿಯಂತ್ರಿಸುವ ಶಕ್ತಿ ಹೈದ್ರಾಬಾದ್ ನಿಜಾಮನಲ್ಲಿ ಇರಲಿಲ್ಲ. ಆದ್ದರಿಂದ ಕ್ರಿ. ಶ. ೧೮೧೮ರ ತರುವಾಯ ಅಧಿಕಾರಕ್ಕೆ ಬಂದ ನಿಜಾಮನು ಈಸ್ಟ್ ಇಂಡಿಯಾ ಕಂಪನಿಗೆ ತಮ್ಮ ಬಾಹ್ಯ ಹಾಗೂ ಆಂತರಿಕ ಆಡಳಿತವನ್ನು ಒಪ್ಪಿಸಿದರು. ಅಲ್ಲದೆ ಕಾಲಕ್ರಮೇಣ ತಮ್ಮ ಅಧೀನದಲ್ಲಿ ಬರುವ ಸಂಸ್ಥಾನಗಳ ವ್ಯವಹಾರವನ್ನು ಸಹ ಬ್ರಿಟಿಷರ ಮೂಲಕವೆ ಆರಂಭಿಸಿದರು. ಈ ನಿಟ್ಟಿನಲ್ಲಿ ಬ್ರಿಟಿಷರು ಮೊದಲ ಬಾರಿಗೆ ಕಲಬುರಗಿ ಜಿಲ್ಲೆಯಲ್ಲಿ ಬರುವ ಸುರಪುರ ಸಂಸ್ಥಾನದ ಕಡೆಗೆ ಗಮನ ಹರಿಸಿದರು. ಆದರೆ ಸುರಪುರದ ನಾಯಕರು ಕಂಪನಿಯ ಆಡಳಿತಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಕ್ರಿ. ಶ. ೧೮೪೧ರಲ್ಲಿ ಅಧಿಕಾರಕ್ಕೆ ಬಂದ ನಾಲ್ವಡಿ ವೆಂಕಟಪ್ಪನಾಯಕರು ಅಪ್ರಾಪ್ತ ವಯಸ್ಸಿನವರಾಗಿರುವುದರಿಂದ, ಅಲ್ಲಿಯ ಆಡಳಿತ ನಿರ್ವಹಣೆಯ ಜವಾಬ್ದಾರಿಯನ್ನು ಹೈದ್ರಾಬಾದ್ ನಿಜಾಮರ ಮುಖಾಂತರ ಬ್ರಿಟಿಷರು ವಹಿಸಿಕೊಂಡರು. ಮೆಡೋಸ್ ಟೈಲರ್‌ನನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸಿ, ಅವನ ಮೂಲಕ ಬ್ರಿಟಿಷರು ಜಿಲ್ಲೆಯ



ಆಡಳಿತದಲ್ಲಿ ಹಸ್ತಕ್ಷೇಪ ಆರಂಭಿಸಿದರು. ಪ್ರಾಪ್ತ ವಯಸ್ಸಿಗೆ ಬಂದ ನಾಲ್ವಡಿ ವೆಂಕಟಪ್ಪನಾಯಕನು ಬ್ರಿಟಿಷರಿಂದ ಸ್ವತಂತ್ರನಾಗಲು ಬಯಸಿ ಆಡಳಿತವನ್ನು ತನ್ನ ಅಂಕಿತಕ್ಕೆ ಒಳಪಡಿಸಿಕೊಂಡನು. ಇದರಿಂದ ಬ್ರಿಟಿಷ್ ಅಧಿಕಾರಿಗಳು ಸುರಪುರ ಸಂಸ್ಥಾನದ ಮೇಲೆ ತಮ್ಮ ಹಿಡಿತ ಸ್ಥಾಪಿಸಲು ನಿರಂತರವಾಗಿ ಪ್ರಯತ್ನಿಸಿದರು.

ಲಾರ್ಡ್ ಡಾಲ್‌ಹೌಸಿಯ ಹಲವು ದಮನಕಾರಿ ಕಾಯ್ದೆಗಳ ಪ್ರಯುಕ್ತ ಆತನ ನಿರ್ಗಮನದ (ಕ್ರಿ.ಶ. ೧೮೫೬) ನಂತರ ಕ್ರಿ. ಶ. ೧೮೫೭ರಲ್ಲಿ ಭಾರತದಲ್ಲಿ ಬ್ರಿಟಿಷರ ವಿರುದ್ಧ ಮೊದಲಬಾರಿಗೆ ದೊಡ್ಡ ಪ್ರಮಾಣದಲ್ಲಿ ಕ್ರಾಂತಿ ನಡೆಯಿತು. ಅದನ್ನು ಸಿಪಾಯಿ ದಂಗೆ ಅಥವಾ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆಯುತ್ತಾರೆ. ಈ ದಂಗೆ ಕೆಲವೆ ತಿಂಗಳುಗಳಲ್ಲಿ ವಿಫಲ ಹೊಂದಿತು. ಅದರಲ್ಲಿ ದಕ್ಷಿಣ ಭಾರತದಲ್ಲಿ ಯಾವುದೇ ಪರಿಣಾಮಗಳನ್ನುಂಟು ಮಾಡಲಿಲ್ಲ. ಕಲಬುರಗಿ ಜಿಲ್ಲೆಯಲ್ಲಿ ಬರುವ ಸುರಪುರದ ನಾಯಕರು ಮಾತ್ರ ಕಂಪನಿಯ ವಿರುದ್ಧ ಪಿತುರಿ ನಡೆಸಿದರು. ಇದನ್ನು ಅರಿತ ವೆಂಕಟಪ್ಪನಾಯಕರು ತನ್ನ ಸೈನ್ಯವನ್ನು ಸಂಘಟಿಸಿಕೊಂಡು ಬ್ರಿಟಿಷರ ವಿರುದ್ಧ ಹೊರಾಟಕ್ಕೆ ಸಿದ್ಧತೆಯನ್ನು ಮಾಡಿಕೊಂಡು, ಬ್ರಿಟಿಷರು ಹೈದ್ರಾಬಾದ್ ನಿಜಾಮರ ಸಹಾಯದಿಂದ ಕ್ಯಾಪ್ಟನ್ ಬ್ಯಾರಿಯ ನೇತೃತ್ವದಲ್ಲಿ ಸುರಪುರವನ್ನು ವಶಪಡಿಸಿಕೊಳ್ಳಲು ಸೈನ್ಯವನ್ನು ಕಳುಹಿಸಲಾಯಿತು. ಸುರಪುರದ 'ಬೇಡ ಜನಾಂಗ'ದ ಪಡೆಗೂ ಮತ್ತು ಬ್ರಿಟಿಷರಿಗೂ ಹಲವು ಭಾಗಗಳಲ್ಲಿ ಯುದ್ಧ ಸಂಭವಿಸಿತು. ಈ ಯುದ್ಧಗಳಲ್ಲಿ ಬ್ರಿಟಿಷ್ ಸೇನಾಪಡೆಯ ನಾಯಕ ಕ್ಯಾಪ್ಟನ್ ಬ್ಯಾರಿ ಹತನಾದನು. ಕೊನೆಗೆ ಸಂಯುಕ್ತ ಪಡೆ ನಾಲ್ವಡಿ ವೆಂಕಟಪ್ಪನಾಯಕನನ್ನು ಮೋಸದಿಂದ ಸೆರೆಹಿಡಿದು ನಾಲ್ಕು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿತು. ಬ್ರಿಟಿಷರಿಂದ ಅವಮಾನಿತನಾಗುವುದಕ್ಕಿಂತ ಆತ್ಮಹತ್ಯೆಗೆ ಶರಣಾಗುವುದೇ ಲೇಸೆಂದು, ನಾಲ್ವಡಿ ವೆಂಕಟಪ್ಪನಾಯಕನು ಜೈಲು ಅಧಿಕಾರಿಗಳ ಬಳಿ ಇದ್ದ ಪಿಸ್ತೂಲನ್ನು ಕಸಿದುಕೊಂಡು ತನ್ನನ್ನು ತಾನೆ ಹೊಡೆದುಕೊಂಡು ಸಾವನ್ನಪ್ಪಿದನು. ಈ ಘಟನೆಯ ಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳು ಕಂಡುಬರುವುದಿಲ್ಲ. ಉತ್ತರ ಕರ್ನಾಟಕದಲ್ಲಿ ಬ್ರಿಟಿಷರು ವಶಪಡಿಸಿಕೊಂಡ ಸುರಪುರ ಸಂಸ್ಥಾನವನ್ನು ಕ್ರಿ.ಶ. ೧೮೫೮ರಲ್ಲಿ ನಿಜಾಮನ ಅಧೀನಕ್ಕೆ ಒಪ್ಪಿಸಲಾಯಿತು. ೧೮೫೮ರಿಂದ ೧೯೪೮ರವರೆಗೆ ನಿಜಾಮನ ಕಪಿಮುಷ್ಟಿಯಲ್ಲಿದ್ದ ಉತ್ತರ ಕರ್ನಾಟಕದ ಬೀದರ್,

ಕಲಬುರ್ಗಿ, ರಾಯಚೂರು ಜಿಲ್ಲೆಗಳಲ್ಲಿ ಸ್ವತಂತ್ರ ಸಂಗ್ರಾಮದ ಚಟುವಟಿಕೆಗಳು ಅತ್ಯಂತ ಮಂದಗತಿಯಲ್ಲಿ ಸಾಗಿದವು. ಅದರಲ್ಲಿ ಸ್ವದೇಶಿಯ ವಸ್ತುಗಳ ಬಳಕೆ, ವಿದೇಶಿಯ ವಸ್ತುಗಳ ತಿರಸ್ಕಾರ, ಖಾದಿಯ ಬಳಕೆಯ ಪ್ರಚಾರ, ದೀನದಲಿತರ ಸುಧಾರಣೆಯ ಚಟುವಟಿಕೆಗಳು ಕೆಲವೊಂದು ಕಡೆಗಳಲ್ಲಿ ಮಾತ್ರ ಕಂಡುಬರುತ್ತಿದ್ದವು. ಕಾರಣ ನಿಜಾಮನ ಸುಧಾರಣೆಯ ವಿರೋಧಿ ಕಾನೂನುಗಳು ಇದಕ್ಕೆ ಅಡೆತಡೆಯನ್ನುಂಟು ಮಾಡುತ್ತಿದ್ದವು.

ಕ್ರಿ. ಶ. ೧೮೫೭ರಲ್ಲಿ ನಡೆದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆಯು ಕಲಬುರಗಿ ಪ್ರದೇಶದ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ. ಕಾರಣ ಹೈದ್ರಾಬಾದ ನಿಜಾಮನು ಬ್ರಿಟಿಷರ ಪರವಾಗಿದ್ದು, ಅವರಿಗೆ ಸೈನಿಕ ಸಹಾಯ ಸಹಕಾರ ನೀಡುತ್ತಿದ್ದನು. ಅಲ್ಲದೆ ಸರಕಾರದ ವಿರುದ್ಧ ಜನರು ದಂಗೆ ಏಳದಂತೆ ಹಲವು ಫರಮಾನ್(ಆಜ್ಞೆ)ಗಳನ್ನು ಹೊರಡಿಸಿ ಜನರನ್ನು ದಂಗೆಯಿಂದ ದೂರ ಉಳಿಯುವಂತೆ ಮಾಡಿದರು. ಆದರೆ ಬ್ರಿಟಿಷರಿಗೆ ಆರ್ಥಿಕ ಸಹಾಯ ನೀಡಲು ಜನತೆಯ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರು. ತೆರಿಗೆ ಅಧಿಕಾರಿಗಳ ವಿರುದ್ಧ ಜನರು ತಮ್ಮ ಆಕ್ರೋಶವನ್ನು ಹೊರಹಾಕಲು ಪ್ರಾರಂಭಿಸಿದರು. ಈ ಹಿನ್ನೆಲೆಯಲ್ಲಿ ಜನರಲ್ಲಿ ರಾಷ್ಟ್ರೀಯತೆಯ ಭಾವನೆಗಳು ಉಂಟಾದವು. ಅಲ್ಲದೆ ಬ್ರಿಟಿಷರು ಮತ್ತು ನಿಜಾಮರು ಜಾರಿಗೆ ತಂದ ಶಿಕ್ಷಣ ನೀತಿಯ ವಿರುದ್ಧ ಜನರು ಆಕ್ರೋಶಭರಿತರಾದರು. ಉರ್ದು ಹಾಗೂ ಇಂಗ್ಲೀಷ್ ಭಾಷೆಯನ್ನು ಕಡ್ಡಾಯವಾಗಿಗೊಳಿಸಿದಾಗ ಸ್ಥಳೀಯರು ಅದರ ವಿರುದ್ಧ ಕೆಲವು ಕಡೆಗಳಲ್ಲಿ ಗಲಭೆಗಳನ್ನು ಆರಂಭಿಸಿದರು.

**ಸ್ವದೇಶಿ ಚಳುವಳಿ (ಕ್ರಿ. ಶ. ೧೯೦೫) :**

ಕಲಬುರಗಿಯಲ್ಲಿ ಸ್ಥಾಪನೆಗೊಂಡ ಶಿಕ್ಷಣ ಸಂಸ್ಥೆಗಳು ಸ್ತ್ರೀಯರಲ್ಲಿ ಸ್ವದೇಶಿ ಚಳುವಳಿಯನ್ನು ಪ್ರಚಾರಕ್ಕೆ ತರಲು ನಿರಂತರವಾಗಿ ಪ್ರಯತ್ನಿಸಿದವು. ಕ್ರಿ. ಶ. ೧೯೦೭ರಲ್ಲಿ ವಿಠಲರಾವ ದೇವಳಗಾಂವರ ಅವರು ಗುಲಬರ್ಗಾದಲ್ಲಿ ನೂತನ ವಿದ್ಯಾಲಯವನ್ನು ಸ್ಥಾಪಿಸಿ, ಇದರ ಮೂಲಕ ಜನರಲ್ಲಿ ಸ್ವಾತಂತ್ರ್ಯದ ಜಾಗೃತಿಯನ್ನು ಮೂಡಿಸಿದರು. ಇವರ ತಂದೆ ಮತ್ತು ಚಿಕ್ಕಪ್ಪನ ಪ್ರಭಾವದಿಂದ ಇವರು ಶಾಲೆಯಿಂದಲೇ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿದರು. ಇದಕ್ಕಿಂತಲೂ ಮುಂಚೆ ನಗರದಲ್ಲಿ ಯಾವುದೇ ಪ್ರಮುಖ ಹೋರಾಟದ ಸಂಘ–ಸಂಸ್ಥೆಗಳು



ಇರಲಿಲ್ಲ. ಕಲಬುರಗಿಯ ನಂತರದಲ್ಲಿ ಜಿಲ್ಲೆಯಲ್ಲಿ ಇದೇ ಮಾದರಿಯಲ್ಲಿ ಚಿಂಚೋಳಿಯಲ್ಲಿ 'ಉಸ್ಮಾನಿಯ ಶಾಲೆ' (ಕ್ರಿ.ಶ. ೧೯೧೧) ರಾಯಚೂರಿನಲ್ಲಿ ಪಂಡಿತ ತಾರಾನಾಥರ ನಾಯಕತ್ವದಲ್ಲಿ "ಮದಸರ–ಇ–ಹಮದರ್ಧ" ಇಂತಹ ಶಾಲೆಗಳು ಭೋಧನೆಯ ಜೊತೆಗೆ–ವಿದ್ಯಾರ್ಥಿಗಳಿಗೆ ಸ್ವದೇಶಿ ಚಳುವಳಿಯ ಕುರಿತು ಮಾಹಿತಿ ನೀಡುತ್ತಿದ್ದವು. ಇವುಗಳ ಪ್ರಭಾವದಿಂದ ಇಲ್ಲಿಯ ಜನರು ನಿಜಾಮ ಸರಕಾರಕ್ಕೆ ನೀಡುವ "ನಜರಾನ" ತೆರಿಗೆಯನ್ನು ನಿಲ್ಲಿಸಿದರು. ಇದರ ಪರಿಣಾಮವಾಗಿ ನಿಜಾಮ ಸರಕಾರದ ತೆರಿಗೆ ನಿರಾಕರಣೆ ಮಾಡಿದವರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಿತು.

ಕ್ರಿ. ಶ. ೧೯೨೦ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು. ಇದೇ ಕಾಲದಲ್ಲಿ ಸ್ಥಳಿಯ ನಾಯಕರು ಜನಾರ್ದನ ದೇಸಾಯಿಯವರ ನೇತೃತ್ವದಲ್ಲಿ ಖಾದಿ ಪ್ರಚಾರ ಹಾಗೂ ವಿದೇಶಿ ವಸ್ತುಗಳ ಬಹಿಷ್ಕಾರವನ್ನು ಆರಂಭಿಸಿದರು. ಕ್ರಿ. ಶ. ೧೯೨೧ರಲ್ಲಿ ದೇವಲಗಾಂವಕರರು ಗಾಂಧೀಜಿಯವರನ್ನು ಸಂಪರ್ಕಿಸಿ ಅವರ ಪ್ರಭಾವದಿಂದ ಖಾದಿಧಾರಿಗಳಾದರು. ಅಂದಿನಿಂದ ಅವರ ಕೊನೆಯ ದಿನಗಳವರೆಗೆ ಖಾದಿಧಾರಿಗಳಾಗಿಯೇ ಜೀವನ ನಡೆಸಿದರು. ಅಲ್ಲದೆ ಇವರು ಕಲಬುರಗಿ ಜಿಲ್ಲೆಯ ಹಲವು ತಾಲೂಕಗಳಲ್ಲಿ ಖಾದಿ ಕೇಂದ್ರಗಳನ್ನು ಸ್ಥಾಪಿಸಿ, ಅದರ ಪ್ರಚಾರದಲ್ಲಿ ತೊಡಗಿದರು. ಇದರಿಂದ ಕಲಬುರಗಿ ನಗರ ಹಾಗೂ ಜಿಲ್ಲೆಯ ಹಲವು ಕಡೆಗಳಲ್ಲಿ ಜನರು ತಮ್ಮಲ್ಲಿ ಇರುವ ವಿದೇಶಿಯ ವಸ್ತುಗಳನ್ನು ಬಹಿರಂಗವಾಗಿ ಸುಟ್ಟುಹಾಕಿದರು. ಗಾಂಧೀಜಿಯವರ ಅನುಯಾಯಿಗಳಾದ ಹಾರ್ಡೀಕರ ಮಂಜಪ್ಪನವರು ಕರ್ನಾಟಕದಲ್ಲಿ ಗಾಂಧೀಜಿಯವರ ಎಲ್ಲಾ ಯೋಜನೆಗಳನ್ನು ಯಶಸ್ವಿಗೊಳಿಸುವಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದರು ಅದರಿಂದಾಗಿ ಅವರನ್ನು "ಕರ್ನಾಟಕದ ಗಾಂಧಿ" ಎಂದು ಕರೆಯುತ್ತಿದ್ದರು. ಇವರ ಅಧ್ಯಕ್ಷತೆಯಲ್ಲಿ ಕ್ರಿ. ಶ. ೧೯೨೮ ಮೇ ೨೬ರಂದು ಧಾರವಾಡದಲ್ಲಿ ಮೊದಲಿಗೆ ಖಾದಿ ಸಮ್ಮೇಳನ ನಡೆಯಿತು. ಕ್ರಿ. ಶ. ೧೯೩೦ರಲ್ಲಿ "ಅಖಿಲ ಕರ್ನಾಟಕ ಸ್ವದೇಶಿ ಸಭಾ" ಪ್ರಾರಂಭವಾಯಿತು. ಈ ರೀತಿಯ ಖಾದಿ ಸಂಘಗಳು ಜಿಲ್ಲೆಯಲ್ಲಿಯೂ ಅಸ್ತಿತ್ವಕ್ಕೆ ಬಂದವು. ಖಾದಿ ಅನುಯಾಯಿಗಳು ವಿದೇಶಿಯ ವಸ್ತುಗಳ ಮಾರಾಟದ ವಿರುದ್ಧ ಮುಷ್ಕರ ಆರಂಭಿಸಿದರು. ಇದರಿಂದ ಖಾದಿಯ ಪ್ರಚಾರ ಹಾಗೂ ಅಸಹಕಾರ ಆಂದೋಲನಗಳು ಹಲವು ಕಡೆಗಳಲ್ಲಿ ನಡೆದವು. ಕರ್ನಾಟಕದಲ್ಲಿ

ಗಂಗಾಧರರಾವ ದೇಶಪಾಂಡೆಯವರ ನೇತೃತ್ವದಲ್ಲಿ ಖಾದಿ ಆಶ್ರಮವನ್ನು ತೆರೆಯಲಾಯಿತು.

ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವ ಕಲಬುರಗಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತದೆ. ಆದರೆ ಕ್ರಿ. ಶ. ೧೯೨೦ರಲ್ಲಿ ಅವರು ಮರಣಹೊಂದಿದ ನಂತರ ಈ ಭಾಗದ ಜನರು ಗಾಂಧೀಜಿಯರ ಪ್ರಭಾವಕ್ಕೆ ಒಳಗಾಗಿ ಖಾದಿ ಚಳುವಳಿಯಲ್ಲಿ ಭಾಗವಹಿಸಲು ಆರಂಭಿಸಿದರು.

ಕಲಬುರಗಿಯ ಪ್ರಮುಖ ನಾಯಕರಾದ ಕಕ್ಕೇರಿ ಹನುಮಂತರಾಯ, ಜನಾರ್ದನ ದೇಸಾಯಿ, ಜಗನಾಥ ಚಂದ್ರಿಕೆ, ವಿಠಲರಾವ ದೇವುಳಗಾಂವಕರ, ಕನಿಹಾಳ ನಾರಾಯಣ ಮುಂತಾದವರು ಖಾದಿ ಪ್ರಚಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅದರ ಜೊತೆಗೆ ಕಾಂಗ್ರೆಸ್‌ನ ಕಾರ್ಯ ಯೋಜನೆಗಳು ಹಾಗೂ ಕನ್ನಡದ ಪ್ರಚಾರವನ್ನು ಮಾಡಿದರು.

ಕ್ರಿ. ಶ. ೧೯೩೨ರಲ್ಲಿ ಕಲಬುರಗಿ ನಗರದ ಶ್ರೀ ಶರಣಬಸಪ್ಪ ಮಂತಾಳರು ತಾವು ಖಾದಿಧಾರಿಗಳಾಗಿ, ಖಾದಿ ಪ್ರಚಾರವನ್ನು ಆರಂಭಿಸಿ, ಕೊನೆಗೆ ಖಾಸಗಿಯಾಗಿ ಖಾದಿ ಸಂಘವನ್ನು ಸ್ಥಾಪಿಸಿದರು. ಕ್ರಿ. ಶ. ೧೯೪೩–೪೪ರಲ್ಲಿ ಹೈದ್ರಾಬಾದ್ ಚರಕಾ ಸಂಘದ ಕಾರ್ಯದರ್ಶಿಗಳು, ಹಾಗೂ ಸ್ಟೇಟ್ ಕಾಂಗ್ರೆಸ್ಸಿನ ನಾಯಕರಾದ ಶ್ರೀ ರಾಮಕೃಷ್ಣ ಅವಧೂತರವರು ಕಲಬುರಗಿಗೆ ಬಂದು ಇಲ್ಲಿಯ ಬಟ್ಟೆ ವ್ಯಾಪಾರಿಗಳಾದ ಪುಷಿಲಾಲ್ ಲಾಹೋಟಿಯವರ ಮನೆಯಲ್ಲಿ ಸಭೆ ನಡೆಸಿದರು, ಇದರಲ್ಲಿ ಖಾದಿ ಪ್ರಚಾರಕರು, ಕಾಂಗ್ರೆಸ ನಾಯಕರು, ವಕೀಲರು, ಬಟ್ಟೆ ವ್ಯಾಪಾರಿಗಳು ಹಾಗೂ ಸ್ವಾತಂತ್ರ್ಯ ಚಳುವಳಿಯ ನಾಯಕರು ಭಾಗವಹಿಸಿದರು. ಈ ಸಭೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಹಲವು ಯೋಜನೆಗಳನ್ನು ಚರ್ಚಿಸಲಾಯಿತು. ಅಲ್ಲದೆ ಕಲಬುರಗಿ ನಗರದಲ್ಲಿ ಖಾದಿ ಸಂಘದ ಸ್ಥಾಪನೆಗೆ ನಿರ್ಣಯ ಕೈಗೊಳ್ಳಲಾಯಿತು. ಈ ಸಭೆಯಲ್ಲಿ ನಾರಾಯಣರಾವ ಕಾರಿಹಾಳ, ವಿಠಲರಾವ ದೇವಳಗಾಂವಕರ ಭಾಗವಹಿಸಿದ್ದರು. ಅಂತಿಮವಾಗಿ ಹರಿಕಿಶನ ಮಾಲು ಅವರ ನೇತೃತ್ವದಲ್ಲಿ ಖಾದಿ ಭಂಡಾರ ತೆರೆಯಲಾಯಿತು. ಮುಂದಿನ ದಿನಗಳಲ್ಲಿ ಕರ್ನಾಟಕ ಗ್ರಾಮ ಸೇವಾ ಸಂಘವು ಖಾದಿ ಪ್ರಚಾರದ ಕಾರ್ಯವನ್ನು ಕೈಗೆತ್ತಿಕೊಂಡಿತು.



ಹೈದ್ರಾಬಾದ್ ಖಾದಿ ಸಂಘದ ಅಧ್ಯಕ್ಷರಾದ ಶ್ರೀ ರಮಾನಂದ ತೀರ್ಥರು ಕಲಬುರಗಿ ಭಾಗದಲ್ಲಿ ಸಂಚಾರ ಕೈಗೊಂಡು ಹೆಚ್ಚಿನ ರೀತಿಯಲ್ಲಿ ಖಾದಿ ಪ್ರಚಾರ ನಡೆಸುವಂತೆ ಸ್ಥಳೀಯರಲ್ಲಿ ಪ್ರೇರಣೆ ನೀಡಿದರು. ಕಲಬುರಗಿಯ ಸುಮಾರು ೧೨ ಜನ ತರುಣರು ಖಾದಿ ಪ್ರಚಾರಗೊಳಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಅದರಲ್ಲಿ ಕೆಲವರು ತಮ್ಮ ಹುದ್ದೆಗಳಿಗೆ ರಾಜಿನಾಮೆ ನೀಡಿದರು, ಮತ್ತೆ ಕೆಲವರು ತಮ್ಮ ಮನೆ ಮನೆಗಳನ್ನು ತ್ಯಜಿಸಿ ಪೂರ್ಣ ಪ್ರಮಾಣದಲ್ಲಿ ಚಳುವಳಿಯನ್ನು ಮುಂದುವರೆಸಿಕೊಂಡು ಹೋದರು.

ಕ್ರಿ. ಶ. ೧೯೩೧ರಲ್ಲಿ ನೆಹರೂ ಅವರ ನೇತೃತ್ವದಲ್ಲಿ ಖಾದಿ ಭಂಡಾರವನ್ನು ಸ್ಥಾಪಿಸಲಾಯಿತು. ಅದರ ಅಂಗವಾಗಿ ಕ್ರಿ. ಶ. ೧೯೪೧ ಏಪ್ರಿಲ್ ೧೫ರಂದು ಹೈದ್ರಾಬಾದನಲ್ಲಿ ಖಾದಿ ಸಮಿತಿ ಅಸ್ತಿತ್ವಕ್ಕೆ ಬಂದಿತು. ಇದರ ನೇತೃತ್ವವನ್ನು ವಹಿಸಿಕೊಂಡ ಸ್ವಾಮಿ ರಮಾನಂದ ತೀರ್ಥರು ಇದರ ಉಪಕೇಂದ್ರಗಳನ್ನು ಹಲವು ಭಾಗಗಳಲ್ಲಿ ಸ್ಥಾಪಿಸಿದರು. ಅದರ ಒಂದು ಚಿಕ್ಕ ಉಪಶಾಖೆ ಕಲಬುರಗಿಯ ಸಮೀಪದ ಆಳಂದದಲ್ಲಿ ಅಸ್ತಿತ್ವಕ್ಕೆ ಬಂದಿತು. ಮುಂದೆ ಹೈದ್ರಾಬಾದದ ವಿಭಜನೆಯ ನಂತರ ಉಸ್ಮಾನಾಬಾದದಲ್ಲಿರುವ ಖಾದಿ ಕೇಂದ್ರವನ್ನು ಕಲಬುರಗಿಗೆ ವರ್ಗಾಯಿಸಲಾಯಿತು. ಈ ಕೇಂದ್ರದಲ್ಲಿ ಸುಮಾರು ಒಂದುನೂರಕ್ಕಿಂತಲೂ ಹೆಚ್ಚಿನ ಚರಕಾಗಳು ಹಾಗೂ ಖಾದಿ ಉತ್ಪಾದಿಸುವ ಇತರ ವಸ್ತುಗಳು ಈ ಕೇಂದ್ರದಲ್ಲಿದ್ದವು. ಖಾದಿ ಸಂಘದ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ. ಇಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಸಂಬಳ ನೀಡುವುದು ಕಷ್ಟಕರವಾಗಿತ್ತು. ಇದರ ಸುಧಾರಣೆ ಕುರಿತು ಹೈದ್ರಾಬಾದನಲ್ಲಿರುವ ಗಾಂಧಿ ಭವನದಲ್ಲಿ ಸಭೆ ಕರೆಯಲಾಯಿತು. ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಹಾಗೂ ಸ್ಥಳೀಯರಾದ ಜನಾರ್ದನ ದೇಸಾಯಿ ಅವರ ಮಾರ್ಗದರ್ಶನದಂತೆ ಉತ್ತರ ಕರ್ನಾಟಕದ ಬೀದರ, ರಾಯಚೂರು, ಸಿಂದನೂರು ಹಾಗೂ ಇತರ ಕಡೆಗಳಲ್ಲಿ ಉಪಕೇಂದ್ರಗಳನ್ನು ಸ್ಥಾಪಿಸಿ ಖಾದಿಯ ಉತ್ಪಾದನೆಯನ್ನು ಹೆಚ್ಚಿಸಿ, ಕಲಬುರಗಿಯ ಕೇಂದ್ರದ ಆರ್ಥಿಕ ಸ್ಥಿತಿಯನ್ನು ಬಲಪಡಿಸಲು ಕ್ರಮ ಜರುಗಿಸಲಾಯಿತು.

ಸ್ವಾಮಿ ರಮಾನಂದ ತೀರ್ಥರ ಮಾರ್ಗದರ್ಶನದಂತೆ ಆಳಂದದಲ್ಲಿರುವ ಖಾದಿ ಸಂಘವು ಸ್ವಾತಂತ್ರವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಇದನ್ನು

ಆಳಂದ ಖಾದಿ ಗ್ರಾಮೋದ್ಯೋಗ ಸಂಘ ಎಂದು ಕರೆಯಲಾಯಿತು. ಈ ಸಂಘದ ಪ್ರಭಾವದಿಂದ ಹಲವು ಸ್ಥಳಿಯರು ಖಾದಿವಸ್ತ್ರ ಧರಿಸುವಂತಾಯಿತು. ಅದರಂತೆ ಕಲಬುರಗಿ ಖಾದಿ ಸಂಘದ ಅಧ್ಯಕ್ಷರಾಗಿ ಜನಾರ್ದನ ದೇಸಾಯಿಯವರು ಕಾರ್ಯನಿರ್ವಹಿಸಿದರು ಇವರ ಮಾರ್ಗದರ್ಶನದಲ್ಲಿ ಆಳಂದ ಖಾದಿ ಸಂಘದಂತೆ ಹಲವು ಸಮಾಜಮುಖಿ ಕಾರ್ಯಗಳನ್ನು ರೂಪಿಸಿದರು.

ರಾಷ್ಟ್ರೀಯ ಚಳುವಳಿಯಲ್ಲಿ ಖಾದಿ ಚಳುವಳಿಯ ಒಂದು ಮಹತ್ವದ ಹೋರಾಟವಾಗಿದೆ. ಗಾಂಧೀಜಿಯವರ ದೃಷ್ಟಿಯಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ. ಇದರಿಂದ ಆರ್ಥಿಕ ಸ್ವಾವಲಂಬನೆಗೊಳಿಸುವುದು ಗಾಂಧೀಜಿಯವರ ಪ್ರಮುಖ ಉದ್ದೇಶವಾಗಿತ್ತು. ಅಲ್ಲದೆ ಖಾದಿಯು ರಾಷ್ಟ್ರಪ್ರೇಮವನ್ನು ಹೆಚ್ಚಿಸಿತು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಸಮವಸ್ತ್ರವಾಯಿತು. ಬಾಲಗಂಗಾಧರ ತಿಲಕರ ಮಾರ್ಗದರ್ಶನದಂತೆ ಕಲಬುರಗಿಯ ಕೌಜಲಗಿ ಹಣಮಂತರಾಯರು ಮನೆಮನೆಗೆ ಹೋಗಿ ಖಾದಿ ಬಟ್ಟೆಯ ರಚನೆಯಲ್ಲಾದ ಹೊಸ ಹೊಸ ಪ್ರಯೋಗಗಳನ್ನು ಜನರಿಗೆ ಹೇಳಿದರು. ಈ ಕಾರ್ಯದಲ್ಲಿ ಅವರಿಗೆ ಸಹಾಯಕರಾಗಿ ಜನಾರ್ದನ ದೇಶಾಯಿ. ಜಗನಾಥರಾವ ಚಂದ್ರಕಿ, ಜಿ. ಎಸ್. ಮೇಲುಕೋಟೆ, ಎಂ. ಜಿ. ಕಲಬುರ್ಗಿ, ಸಿ. ಕೆ. ದೇಶಪಾಂಡೆ, ಖಾಸ್‌ನೀಸ್, ಮಹಾದೇವ ಪಿಂಡು, ಶಹಬುದ್ದೀನ ನಾಗೂರ, ರುಕುಮಯ್ಯ ಸಂಕ್ಲಾಪುರ, ಭೀಮಾಚಾರ್ಯ ಮಠದ, ಬಿ. ಬಿ. ಜೋಶಿ, ಎಂ. ವಿ. ತೊಳಮಷ್ಟಿ ಮುಂತಾದವರು ಭಾಗವಹಿಸಿದರು.

ಹೈದ್ರಾಬಾದ್ ಕರ್ನಾಟಕ ಗ್ರಾಮ ಸೇವಾ ಸಂಘವು ಕಲಬುರಗಿಯಲ್ಲಿ ಒಂದು ಕಾರ್ಯಾಲಯವನ್ನು ಆರಂಭಿಸಿ. ಇದರ ಮೂಲಕ "ಚರಕಾ"ಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಆರಂಭಿಸಿತು ಚಿತ್ತಾಪುರದ ಶಂಕರರಾವ, ತ್ರಿಲೋಚನಾ ದೀಕ್ಷಿತ ಅವರು ಇದರ ಮೇಲ್ವಿಚಾರಕರಾಗಿ ಕಾರ್ಯ ಪ್ರಾರಂಭಿಸಿದರು. ಪ್ರತಿವರ್ಷ ಗಾಂಧೀಜಿಯವರ ಜಯಂತಿಯ ದಿನದಂದು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿತ್ತು. ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಗಳು ಹೈದ್ರಾಬಾದ್ ಸಂಸ್ಥಾನದಲ್ಲಿ ರಮಾನಂದ ತೀರ್ಥರ ನೇತೃತ್ವದಲ್ಲಿ ನಡೆದವು ಆದರೆ ನಿಜಾಮ್ ಸರಕಾರ ಇವರ ಮೇಲೆ ಕಠಿಣ ಶಿಕ್ಷೆ



ಜರುಗಿಸಿ, ಅದರ ನಾಯಕರನ್ನು ಸೆರೆಮನೆಗೆ ತಳ್ಳುವುದರ ಮೂಲಕ ಇದರ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದರು. ಕ್ರಿ. ಶ. ೧೯೪೮ರಲ್ಲಿ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳು ವಿಮೋಚನೆಗೊಂಡ ನಂತರ, ಮತ್ತೆ ಖಾದಿ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಪುನರ್ ಆರಂಭಗೊಂಡವು. ಇದನ್ನು "ಹೈದ್ರಾಬಾದ ಖಾದಿ ಉಪಸಮಿತಿ" ಎಂದು ಕರೆಯಲಾಯಿತು. ಜನಾರ್ದನರಾವ ದೇಸಾಯಿ ಅವರ ಅಧ್ಯಕ್ಷರಾಗಿಯೂ, ಕನಿಹಾಳ ನಾರಾಯಣರಾವ ಕಾರ್ಯದಶಿಗಳಾಗಿ ಕಾರ್ಯ ಆರಂಭಿಸಿದರು. ಕಲಬುರಗಿಯ ಹಲವು ಖಾದಿ ಪ್ರೇಮಿಗಳು ಹೈದ್ರಾಬಾದಿನ ಖಾದಿ ಕಾರ್ಯಲಯಕ್ಕೆ ಹೋಗಿ ತರಬೇತಿಯನ್ನು ಪಡೆದುಕೊಂಡು ಬಂದ ಅದರ ಕಾರ್ಯಯೋಜನೆಗಳನ್ನು ಪ್ರಚಾರದಲ್ಲಿ ತಂದರು. ಅಲ್ಲದೆ ಜಿಲ್ಲೆಯ ಹಲವು ಸ್ಥಳಗಳಲ್ಲಿ ಖಾದಿ ಕೇಂದ್ರಗಳನ್ನು ಸ್ಥಾಪಿಸಿದರು. ಇದರಿಂದ ಜಿಲ್ಲೆಯ ತುಂಬೆಲ್ಲಾ ಖಾದಿ ಬಟ್ಟೆಗೆ ತುಂಬಾ ಬೇಡಿಕೆ ಬಂದಿತು.

## ಅಸಹಕಾರ ಚಳವಳಿ (ಕ್ರಿ. ಶ. ೧೯೨೨)

ಹೈದರಾಬಾದ್ ರಾಜ್ಯದಲ್ಲಿ ಖಿಲಾಫತ್ ಚಳುವಳಿಯ ಪ್ರಚಾರ ಸುಗಮವಾಗಿ ನಡೆಯಿತು. ಕ್ರಿ. ಶ. ೧೯೨೦ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್, ಅಸಹಕಾರ ಮತ್ತು ಖಿಲಾಫತ್ ಚಳುವಳಿಗಳನ್ನು ಒಟ್ಟಾಗಿ ಸೇರಿ ನಡೆಸಿದರು. ಹೈದರಾಬಾದ್ ರಾಜ್ಯದಲ್ಲಿ ಹಿಂದೂ ಮುಸ್ಲಿಂರ ಒಗ್ಗಟ್ಟಿನ ಕಾಲವಾಗಿತ್ತು. ಕ್ರಿ. ಶ. ೧೯೨೦ರಲ್ಲಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಖಿಲಾಫತ್ ದಿನವೆಂದು ಆಚರಿಸಲಾಯಿತು ಮತ್ತು ಕೆಲವು ನಿರ್ಣಯಗಳನ್ನು ತೆಗೆದುಕೊಂಡು ವೈಸ್‌ರಾಯನಿಗೆ ಕಳಿಸಿಕೊಡಲು ಹೈದರಾಬಾದ್ ನಿಜಾಮನಿಗೆ ಸಲ್ಲಿಸಲಾಯಿತು. ಅಸಹಕಾರ ಚಳುವಳಿಯೂ ಕೂಡ ಹೈದರಾಬಾದ್ ರಾಜ್ಯದಲ್ಲಿ ಯಶಸ್ವಿಯಾಗಿ ನಡೆಯಿತು.

ಅಸಹಕಾರ ಚಳುವಳಿಯ ಅಂಗವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರೀಯ ಚಳುವಳಿಯ ಕಾರ್ಯಕ್ರಮಗಳಾದ ಸ್ವದೇಶೀ ವಸ್ತುಗಳನ್ನು ಉಪಯೋಗಿಸುವುದು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು, ಖಾದಿಬಟ್ಟೆಯನ್ನು ಧರಿಸುವುದು, ಖಾದಿಬಟ್ಟೆ ತಯಾರಕರಿಗೆ ಪ್ರೋತ್ಸಾಹ ನೀಡುವುದು. ಮದ್ಯಸೇವನೆಯನ್ನು ನಿಲ್ಲಿಸುವುದು ಹಾಗೂ ಹಿಂದೂ–ಮುಸ್ಲಿಂ ಐಕ್ಯತೆ ಸಾಧಿಸುವುದು ನಡೆಯಿತು. ೧೯೩೪ರಲ್ಲಿ ಹರಿಜನ ಉದ್ಧಾರ

ಕಾರ್ಯಕ್ರಮದ ಅಂಗವಾಗಿ ಮಹಾತ್ಮಾಗಾಂಧೀಜಿ ಹೈದರಾಬಾದ್‌ಗೆ ಭೇಟಿ ನೀಡಿದರು. ಹೈದರಾಬಾದಿಗೆ ಗಾಂಧಿಯ ಆಗಮನ ವಿದ್ಯುತ್ ಸಂಚಾರದೋಪಾದಿಯಲ್ಲಿ ಜನರಿಗೆ ಪ್ರೇರಣೆ ದೊರೆಯಿತು. ಸ್ವದೇಶಿ ಮತ್ತು ಅಸಹಕಾರ ಚಳುವಳಿಗೆ ಜನಸ್ಪರ್ಶವಾಯಿತು. ಸ್ವಾತಂತ್ರ್ಯದ ಕೂಗು ಎಲ್ಲಡೆ ಹರಡಿತು.

ಮೊದಲನೇ ಪ್ರಪಂಚ ಯುದ್ಧದ ಸಮಯದಲ್ಲಿ ಬ್ರಿಟಿಷರು ಭಾರತೀಯರ ಸಹಕಾರವನ್ನು ಬಯಸಿದ್ದರು. ಅಲ್ಲದೇ ಮುಸ್ಲಿಂರ ಬೆಂಬಲ ಗಳಿಸಲು ಖಿಲಾಫತ್‌ಗೆ ಧಕ್ಕೆ ತಗುಲದಂತೆ ಟರ್ಕರಿಗೆ ಅನುಕೂಲಕರವಾದ ಒಪ್ಪಂದ ಮಾಡಿಕೊಡುವ ಭರವಸೆ ಕೊಟ್ಟಿದ್ದರು. ಆದರೆ ೧೯೨೦ರ ಒಪ್ಪಂದ ಟರ್ಕಿಗೆ ಪ್ರತಿಕೂಲವಾಗಿತ್ತು. ಟರ್ಕಿ ಸಾಮ್ರಾಜ್ಯವನ್ನು ಛಿದ್ರಗೊಳಿಸುವ ಹುನ್ನಾರದಿಂದ ಮುಸ್ಲಿಮರು ಬ್ರಿಟಿಷರನ್ನು ವಿಶ್ವಾಸಘಾತುಕರೆಂದು ತಿಳಿದು, ಅವರ ವಿರುದ್ಧ ಸೇಡಿನ ಮನೋಭಾವವನ್ನು ತಾಳಿದರು. ಅಲಿ ಸಹೋದರರು ಖಿಲಾಫತ್ ಪಕ್ಷವನ್ನು ರಚಿಸಿಕೊಂಡು ಟರ್ಕಿಸಾಮ್ರಾಜ್ಯ ಮತ್ತು ಖಲೀಫನ ಪಾವಿತ್ರ್ಯ ಸಂರಕ್ಷಣೆಗೆ ಪಣತೊಟ್ಟರು.

ತಮ್ಮ ಗುರಿ ಸಾಧನೆಗೆ ಮತ್ತು ಹಿಂದೂಗಳ ಸಹಕಾರದ ಅಗತ್ಯವನ್ನು ಕಂಡರು. ಬ್ರಿಟಿಷರ ವಿರುದ್ಧ ಹೋರಾಡಲು ಹಿಂದೂ ಮುಸ್ಲಿಮರನ್ನು ಒಂದುಗೂಡಿಸಲು ಇದೊಂದು ಉತ್ತಮ ಅವಕಾಶವಾಯಿತು. ಅನೇಕ ರಾಷ್ಟ್ರೀಯ ನಾಯಕರು ಖಿಲಾಫತ್ ಚಳವಳಿಯ ಪರವಾಗಿ ನಿಂತರು. ಖಿಲಾಫತ್ ಸಮಿತಿ ಮತ್ತು ಕಾಂಗ್ರೆಸ್ ಅಸಹಕಾರ ಚಳವಳಿಯ ಉದ್ದೇಶಗಳನ್ನು ಸ್ಪಷ್ಟಪಡಿಸಿ, ನಾಲ್ಕೂ ಹಂತಗಳಲ್ಲಿ ಚಳುವಳಿಯನ್ನು ಕೈಗೊಳ್ಳಬೇಕೆಂದು ಕೇಳಿಕೊಂಡಿತ್ತು ಮತ್ತು ಕಾಂಗ್ರೆಸ್ ಏಳು ಅಂಶಗಳ ಕಾರ್ಯಕ್ರಮವನ್ನು ರೂಪಿಸಿತು.

ಪೋಲೀಸರ ಮೆರವಣಿಗೆಯಲ್ಲಿದ್ದವರ ಮೇಲೆ ಹಲ್ಲೆಮಾಡಿದರು. ಗುಂಡು ಹಾರಿಸಿದರು. ರೊಚ್ಚಿಗೆದ್ದ ಚಳವಳಿಗಾರರು ಹತ್ತಿರದ ಪೋಲೀಸ್ ಠಾಣೆಗೆ ಬೆಂಕಿಯಿಟ್ಟರು. ಇಪ್ಪತ್ತೆರಡು ಮಂದಿ ಪೋಲೀಸರು ಜೀವಂತ ಬೆಂದರು. ಈ ಹಿಂಸಾಚಾರದ ಘಟನೆಯಿಂದ ಖಿನ್ನರಾದ ಗಾಂಧಿ ಫೆಬ್ರವರಿ ೨೨, ೧೯೨೨ರಂದು ಕಾಯಿದೆಭಂಗ ಚಳವಳಿಯನ್ನು ಹಿಂತೆಗೆದುಕೊಳ್ಳುವ ಬಾರ್ಡೋಲಿ ಹೇಳಿಕೆನ್ನಿತ್ತರು. ಹಿಂಸೆಯಿಂದ ಯಾವ ಸಾಧನೆಯನ್ನೂ ಮಾಡಿದಂತಾಗುವುದಿಲ್ಲ ಎಂದರು.



ಈ ರೀತಿ ಹಠಾತ್ತನೆ ಕೈಗೊಂಡ ಗಾಂಧಿಯವರ ನಿರ್ಧಾರದಿಂದ ಅನೇಕ ನಾಯಕರಿಗೆ ದಿಗ್ಭ್ರಮೆಯಾಯಿತು. ಉದ್ದೇಶ ಸಾಧನೆಯಾಗುವುದಕ್ಕೆ ಮುಂಚೆಯೇ ಚಳವಳಿಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರಿಂದ ಜೈಲಿನಲ್ಲಿದ್ದ ಜವಾಹರಲಾಲ್ ನೆಹರು, ಸಿ. ಆರ್. ದಾಸ್ ಮೊದಲಾದ ಅನೇಕ ನಾಯಕರು ನಿರಾಶೆಗೊಂಡರು. ಅವರಿಗೆ ಕತ್ತಲೆ ಕವಿದಂತಾಯಿತು. ಖಿಲಾಫತ್ ನಾಯಕರಿಗೆ ಇದು ವಿಶ್ವಾಸ ಘಾತುಕವಾಗಿ ಕಂಡಿತು. ಇಂತಹ ಸಮಯದಲ್ಲಿ ಗಾಂಧಿ ಬಂಧನಕ್ಕೊಳಗಾದರು. ಅವರಿಗೆ ಆರು ವರ್ಷಗಳ ಸೆರೆಯನ್ನು ವಿಧಿಸಲಾಯಿತು. ಇಡೀ ಚಳವಳಿ ಗಾಂಧಿಯನ್ನು ಕೇಂದ್ರ ಬಿಂದುವನ್ನಾಗಿ ಹೊಂದಿದ್ದು ತಾತ್ಕಾಲಿಕವಾಗಿ ಸ್ಥಗಿತಗೊಂಡಿತು.

ಆರ್ಯ ಸಮಾಜ ಸಂಘಟನೆ ಹೈದರಾಬಾದ್ ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂಸಾತ್ಮಕ ಮಾರ್ಗ ಅನುಸರಿಸಿದರೆ, ಕಾಂಗ್ರೆಸ್ ಪಕ್ಷ ಅಹಿಂಸಾತ್ಮಕ ಪಥ ಹಿಡಿಯಿತು. ಮಾರ್ಚ್ ೧೬, ೧೯೨೦ರಂದು ಹೈದರಾಬಾದಿನ ವಿವೇಕವರ್ಧಿನಿ ಹೈಸ್ಕೂಲಿನಲ್ಲಿ ದೊಡ್ಡ ಸಭೆ ಸೇರಿ ಅದರಲ್ಲಿ ಸಾವಿರಾರು ಜನ ಭಾಗವಹಿಸಿದರು. ಬ್ರಿಟಿಷ್ ಹಾಗೂ ನಿಜಾಮ ಸರಕಾರಗಳ ವಿರುದ್ಧ ಘೋಷಣೆ ಮಾಡಿದರು. ಈ ಘಟನೆ ಹೈದರಾಬಾದ್ ಸಂಸ್ಥಾನದಲ್ಲಿ ನಡೆದ, ಅಸಹಕಾರ ಚಳುವಳಿಯ ಪ್ರಥಮ ಕಹಳೆಯೆಂದೆನ್ನಬಹುದು.

ಮಹಾತ್ಮಾ ಗಾಂಧೀಜಿಯವರು ಕ್ರಿ. ಶ. ೧೯೨೪ರಲ್ಲಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಪರಿಣಾಮವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಸಕ್ತಿವಹಿಸಲು ಪ್ರಚೋದನೆ ಸಿಕ್ಕಿತ್ತು. ಇದಕ್ಕೆ ಪೂರ್ವದಲ್ಲಿ ಕ್ರಿ. ಶ. ೧೯೨೧–೨೨ರಲ್ಲಿ ಗುಲಬರ್ಗಾದಲ್ಲಿ ಕರಾಳ ಸ್ವರೂಪದ ಹಿಂದೂ–ಮುಸಲ್ಮಾನರ ದಂಗೆ ನಡೆಯಿತು. ಜನಾರ್ದನ್‌ರಾವ್ ದೇಸಾಯಿಯವರು ತಿಳಿಸಿರುವಂತೆ "ನಗರದಲ್ಲಿರುವ ಗುಡಿಗಳನ್ನು ಹಾಗೂ ಶರಣ ಬಸವೇಶ್ವರ ಗುಡಿಯನ್ನು ಕೆಡವಲು ಪ್ರಯತ್ನಗಳು ನಡೆದವು. ಕೊನೆಗೆ ಸಿ.ಐಡಿ– ಡಿ.ಎಸ್.ಪಿ. ಅವರುಗಳ ಮರಣವಾಯಿತು. ಗಾಂಧೀಜಿಯವರು ಹರಿಜನ (ಯಂಗ್ ಇಂಡಿಯಾ) ಪತ್ರಿಕೆಯಲ್ಲಿ 'ಗುಲಬರ್ಗಾ ಗಾನ್ ಮ್ಯಾಡ್' ಎಂಬ ಲೇಖನ ಬರೆದು ಪ್ರಕಟಿಸಿದರು", ಇದು ಆ ಕಾಲದ ಪ್ರಮುಖ ಪ್ರಚೋದಕ ಘಟನೆಯಾಗಿತ್ತೆಂದು

ದೇಸಾಯಿ ಅವರು ತಿಳಿಸುತ್ತಾರೆ. ಮಹಾತ್ಮಾಗಾಂಧೀಜಿಯವರು ಕ್ರಿ. ಶ. ೧೯೨೪ರಲ್ಲಿ ಗುಲಬರ್ಗಾಕ್ಕೆ ಇದೇ ಸಂದರ್ಭದಲ್ಲಿ ಭೇಟಿ ನೀಡಿ ಶರಣ ಬಸವೇಶ್ವರ ದೇವಾಲಯವನ್ನು ಸಂದರ್ಶಿಸಿದರು. ಇವರ ಭೇಟಿ ಸ್ವಾತಂತ್ರ್ಯ ಚಳುವಳಿಗಾರರ ಮನಸ್ಸಿನ ಮೇಲೆ ಆಗಾಧ ಪರಿಣಾಮವು ಬೀರಿತು. ಮುಖ್ಯವಾಗಿ ಗುಲಬರ್ಗಾ ಜಿಲ್ಲೆಯು ಹೈದರಾಬಾದ್ ರಾಜ್ಯದ ಭಾಗವಾಗಿದ್ದ ಕಾರಣ ಮತ್ತು ನಿಜಾಮರು ಬ್ರಿಟೀಷರಿಗೆ ಓಲೈಸಬೇಕಾಗಿದ್ದರಿಂದ ಕರ್ನಾಟಕ ಬೇರೆಡೆಗೆ ಸಂಭವಿಸಿದ ಅಸಹಕಾರ ಚಳವಳಿ ಅಥವಾ ಕರಾನಿರಾಕರಣ ಸತ್ಯಾಗ್ರಹಗಳು ಗುಲಬರ್ಗಾದಲ್ಲಿ ಹೆಚ್ಚು ತೀವ್ರತೆಯನ್ನು ಪಡೆದಿರಲಿಲ್ಲ.

ಹೈದರಾಬಾದ್ ಖಾದಿ ಸಮಿತಿಯನ್ನು ನಿಜಾಂ ರಾಜ್ಯದಲ್ಲಿ ೧೫ ಏಪ್ರಿಲ್ ೧೯೪೧ರಲ್ಲಿ ಸ್ಥಾಪಿಸಲಾಯಿತು. ಸ್ವಾಮಿರಮಾನಂದರು ಇದರ ಪ್ರಮುಖ ಸೂತ್ರಧಾರಿಗಳಾಗಿದ್ದರು. ಪ್ರಥಮವಾಗಿ ಕ್ರಿ. ಶ. ೧೯೩೧ರಲ್ಲಿ ನೆಹರೂ ಅವರ ಹಸ್ತದಿಂದ ಖಾದಿ ಭಂಡಾರ ಸ್ಥಾಪಿಸಲಾಯಿತು. ಮೊತಕಪಲ್ಲಿಯಲ್ಲಿ ಖಾದಿ ಉತ್ಪತ್ತಿ ಕೇಂದ್ರವನ್ನು ಸ್ಥಾಪಿಸಲಾಯಿತು. ಹೈದರಾಬಾದಿನ ಖಾದಿ ಸಮಿತಿಯ ಒಂದು ಚಿಕ್ಕ ಕೇಂದ್ರ ಆಳಂದದಲ್ಲಿತ್ತು. ಅಲ್ಲಿ ಕೆಲವು ಅಂಬರ ಚರಕಾಗಳಿದ್ದವು. ಆರಂಭದಲ್ಲಿ ಕಾನಿಹಾಳ್ ನಾರಾಯಣರಾವ್ ಹಾಗೂ ಗೂರ್ಜರರು ಇಲ್ಲಿಯ ಕಾರ್ಯಕರ್ತರು. ಪ್ರಾಯಶ: ಕ್ರಿ. ಶ. ೧೯೬೩ರ ಅವಧಿಯವರೆಗೂ ಈ ಕೇಂದ್ರವು ಹೈದರಾಬಾದ್ ಖಾದಿ ಸಮಿತಿಯ ಉಪಕೇಂದ್ರವಾಗಿಯೇ ಕಾರ್ಯನಿರ್ವಹಿಸಿದಂತೆ ಕಂಡುಬರುತ್ತದೆ. ಹೈದರಾಬಾದನ ವಿಭಜನೆಯಾದ ನಂತರ ಇದನ್ನು ಉಸ್ಮಾನಾಬಾದ್‌ದಿಂದ ಗುಲಬರ್ಗಾ ವಿಭಾಗಕ್ಕೆ ವರ್ಗಾಯಿಸಲಾಯಿತು. ಈ ಭಂಡಾರದಲ್ಲಿ ಸುಮಾರು ೧೦೦ ಅಂಬರ ಚರಕಾ ಹಾಗೂ ಇತರ ಸರಂಜಾಮು ವಸ್ತುಗಳಿದ್ದು, ಸಂಘದ ಆರ್ಥಿಕ ಪರಿಸ್ಥಿತಿ ಸಮಾಧಾನಕರವಾಗಿರಲಿಲ್ಲ. ವಾರದ ಕೂಲಿಯನ್ನು ನೀಡಲು ಹಣವಿರುತ್ತಿರಲಿಲ್ಲ. ಏಕೆಂದರೆ ಸಂಸ್ಥಾನದಲ್ಲಿ ಹಣದ ಅಭಾವ. ಹೀಗಾಗಿ ನೂಲು ತೆಗೆಯುವ ಹಾಗೂ ನೇಕಾರರಿಗೆ ಕೂಲಿ ಕೊಡಲು ತೊಂದರೆಯಾಗುತ್ತಿತ್ತು. ಏನೆಲ್ಲಾ ಉಪಾಯ ಮಾಡಿದರೂ ಈ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗಲಿಲ್ಲ.

ಹೀಗಾಗಿ ಹೈದರಾಬಾದ್ ಗಾಂಧಿ ಭವನದಲ್ಲಿ ಇದರ ಬಗ್ಗೆ ಚರ್ಚಿಸಲಾಯಿತು. ಆಗ ಸ್ವರ್ಗೀಯ ಜನಾರ್ದನರಾವ್ ದೇಸಾಯಿ ಅವರ ಮಾರ್ಗದರ್ಶನದಲ್ಲಿ ಹೈದರಾಬಾದ್ ಕರ್ನಾಟಕ ಖಾದಿ ಸಮಿತಿಯನ್ನು ರಚಿಸಿ ಅಲ್ಲಿಂದ ಗುಲಬರ್ಗಾ, ಬೀದರ್, ರಾಯಚೂರು, ಸಿಂಧನೂರು ಉಪಕೇಂದ್ರಗಳನ್ನು ಅದರಡಿಯಲ್ಲಿ ತಂದು ಸ್ವತಂತ್ರ ಕಾರ್ಯಾಚರಣೆಗೆ ಆಸ್ಪದ ಮಾಡಿಕೊಡಲಾಯಿತು. ಈ ಪ್ರಸ್ತಾವನೆಗೆ ಸ್ವಾಮಿ ರಮಾನಂದರು ಆಶೀರ್ವದಿಸಿದರು. ಅವರ ಪ್ರೇರಣೆ ಮತ್ತು ಆಶೀರ್ವಾದದ ಬೆಂಬಲದಿಂದ ಆಳಂದ ಸ್ವತಂತ್ರವಾಗಿ ಕಾರ್ಯ ಮಾಡಲು ಆರಂಭಿಸಿತು. ಅದನ್ನು ಆಳಂದ ಖಾದಿ ಗ್ರಾಮೋದ್ಯೋಗ ಸಂಘ ಎಂದೇ ಕರೆಯಲಾಯಿತು. ಹತ್ತು ವರ್ಷ ಖಾದಿ ಧರಿಸುತ್ತಿದ್ದ ಖಾದಿ ಭಕ್ತರ ಒಂದು ಟ್ರಸ್ಟನ್ನು ನಿರ್ಮಿಸಬೇಕೆಂದೂ ನಿರ್ಣಯಿಸಲಾಯಿತು. ಹೀಗಾಗಿ ಕ್ರಿ. ಶ. ೧೯೬೦ರಲ್ಲಿ ಆಳಂದ ಮತ್ತು ಸಿಂಧನೂರು ಖಾದಿ ಗ್ರಾಮೋದ್ಯೋಗ ಸಂಘಗಳನ್ನು ಬೆಂಗಳೂರಿನ ಕಾರ್ಯಾಲಯದೊಂದಿಗೆ ಜೋಡಣೆ ಮಾಡಲಾಯಿತು. ಆಗ ಆಳಂದ ಖಾದಿ ಗ್ರಾಮೋದ್ಯೋಗ ಸಂಘವೆಂದೇ ನಾಮಕರಣ ಮಾಡಲಾಯಿತು. ಆದರೂ ಕಾರ್ಯಾಚರಣೆ ತೃಪ್ತಿಕರವಾಗಿರಲಿಲ್ಲ. ಅನೇಕ ಅಡಚಣೆಗಳುಂಟಾದವು. ಆಗ ಹೈದರಾಬಾದ್ ಸುಲ್ತಾನ ಬಜಾರಿನಲ್ಲಿಯ ಖಾದಿ ನಿವಾಸದಲ್ಲಿ ರಮಾನಂದ ತೀರ್ಥರು ಒಂದು ಸಭೆ ಕರೆದರು. ಅಲ್ಲಿ ಆಶ್ವಾಸನೆಯೇನೋ ದೊರೆಯಿತು. ಆದರೆ ಶೀರ್ಘದಲ್ಲಿಯೇ ಅವರು ಮರಣವಾದರು. ಕರ್ನಾಟಕ ಖಾದಿ ಬೋರ್ಡ್‌ಗೆ ಸಂಲಗ್ನ ಹೊಂದಿದ್ದುರಿಂದ ಅದರ ನಿಯಮಾವಳಿಯಂತೆ ಕಾರ್ಯ ಮಾಡಲು ನಿರ್ಧರಿಸಿದಾಗ ೧೦೦ ರೂಪಾಯಿಗಳು ಇರಲಿಲ್ಲ. ಈ ಕಠಿಣ ಪರಿಸ್ಥಿತಿಯಲ್ಲಿ ಬೆಂಗಳೂರಿನ ಖಾದಿ ಬೋರ್ಡನ್ನು ಸದಸ್ಯರಾಗಿದ್ದ ಎಂ. ಜಿ. ಜೋಷಿಯವರು ತುಂಬಾ ಸಹಾಯ ಮಾಡಿದರು.

ಪೂಜ್ಯ ಸ್ವಾಮಿ ರಮಾನಂದ ತೀರ್ಥರೂ ಹೈದರಾಬಾದ್ ಖಾದಿ ಸಮಿತಿಯ ಅಧ್ಯಕ್ಷರಾಗಿದ್ದರು. ಮುಂದೆ ಅವರು ಹೈದ್ರಾಬಾದ್ ಕರ್ನಾಟಕದಲ್ಲಿ ಖಾದಿ ಸಮಿತಿಯು ಹೈದರಾಬಾದ್ ಕರ್ನಾಟಕದಲ್ಲಿ ಒಂದು ಉಪಸಮಿತಿಯನ್ನು ಗುಲಬರ್ಗಾದಲ್ಲಿ ಪ್ರಾರಂಭಿಸಲಾಯಿತು. ಅದಕ್ಕೆ ದಿ. ಜನಾರ್ದನರಾವ್ ದೇಸಾಯಿಯವರು ಅಧ್ಯಕ್ಷರಾಗಿದ್ದರು ಮತ್ತು ಶ್ರೀ ನಾರಾಯಣರಾವ್ ಕಾನಿಹಾಳರನ್ನು ಸಂಯೋಜಕರೆಂದು ನೇಮಿಸಿ ಆಳಂದದಲ್ಲಿ ಮುಖ್ಯ ಕೇಂದ್ರ ಪ್ರಾರಂಭಿಸಲಾಯತು. ಕ್ರಿ. ಶ. ೧೯೬೮–೬೯ರಲ್ಲಿ ಹೈದರಾಬಾದ್ ಖಾದಿ

ಸಮಿತಿಯ ವಿಕೇಂದ್ರೀಕರಣದ ಪರಿಣಾಮವಾಗಿ ಆಳಂದ ಖಾದಿ ಗ್ರಾಮೋದ್ಯೋಗ ಸಂಘ ಆಳಂದವೆಂದು ೨೮.೩.೧೯೬೮–೬೯ಕ್ಕೆ ಸ್ವತಂತ್ರ ಸಂಘವೆಂದು ನೋಂದಣೀಕರಿಸಲಾಯಿತು.

**ಆರ್ಯ ಸಮಾಜದ ಪಾತ್ರ:**

ಹಿಂದೂ ಧರ್ಮದ ರಕ್ಷಣೆಗೆ ಮತಾಂತರ ತಡೆ, ಕೋಮುಗಲಭೆಗಳನ್ನು ನಿಲ್ಲಿಸಲು ಸ್ವಾಮಿ ದಯಾನಂದ ಸರಸ್ವತಿ ಹಾಗೂ ಸ್ವಾಮಿ ಶ್ರದ್ಧಾನಂದರ ಪರಿಶ್ರಮದ ಫಲವಾಗಿ ಆರ್ಯಸಮಾಜವು ಅಸ್ತಿತ್ವಕ್ಕೆ ಬಂದಿತು. ಇದು ಜನರಲ್ಲಿ ಜಾಗೃತಿಯನ್ನು ಮಾಡುವುದರ ಜೊತೆಗೆ ಕ್ರಿಶ್ಚಿಯನ್ ಪಾದ್ರಿಗಳು ಹಾಗೂ ನಿಜಾಮರ ಪಿತೂರಿಗಳನ್ನು ಬಹಿರಂಗವಾಗಿ ಖಂಡಿಸುತ್ತಾ ಸಮಾಜದಲ್ಲಿ ಸುಧಾರಣೆಯನ್ನು ಮಾಡುತ್ತಾ, ಹಲವು ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಂಡು ಜನರ ಪ್ರೀತಿಗೆ ಪಾತ್ರವಾಗಿತ್ತು. ಆರ್ಯ ಸಮಾಜದ ನಾಯಕರು ಮತ್ತು ಸದಸ್ಯರು ನಿರ್ಭಯವಾಗಿ ನಗರಗಳಲ್ಲಿ ಭಾಷಣಗಳನ್ನು ಏರ್ಪಡಿಸುತ್ತಿತ್ತು. ಕೆಲವೊಮ್ಮೆ ಪೊಲೀಸರ ಲಾಠಿ ಏಟು ತಿಂದು ರಕ್ತ ಸುರಿಸಿದರೂ ತಮ್ಮ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುತ್ತಿದ್ದರು. ಆರ್ಯಸಮಾಜದ ಧಾರ್ಮಿ ಚಟುವಟಿಕೆಗಳ ಮೇಲೆ ನಿಜಾಮನು ನಿರ್ಬಂಧ ಹೇರಿದರೂ ಕಾರ್ಯಕರ್ತರು ಯಾವುದೇ ನಿರ್ಬಂಧನೆಗಳನ್ನು ಗಮನಿಸದೆ ಜರಲ್ಲಿ ಜಾಗೃತಿಯನ್ನುಂಟು ಮಾಡಿದರು.

ಕ್ರಿ. ಶ. ೧೯೨೧–೨೨ರಲ್ಲಿ ಕಲಬುರಗಿಯಲ್ಲಿ ಹಿಂದೂ–ಮುಸ್ಲಿಂರ ಮಧ್ಯೆ ಹಲವು ದಂಗೆಗಳು ನಡೆದವು. ಇವುಗಳು ಹಿಂದೂಗಳನ್ನು ಕರಾಳ ಛಾಯೆಯಲ್ಲಿ ಮುಳುಗಿಸಿದವು. ಈ ಘಟನೆಯನ್ನು ಆರ್ಯಸಮಾಜ ಕಾರ್ಯಕರ್ತರು ನಾಡಿನ ತುಂಬೆಲ್ಲಾ ಪ್ರಚಾರಕ್ಕೆ ತಂದು. ನಗರದ ದೇವಸ್ಥಾನಗಳನ್ನು ಹಾಗೂ ಧಾರ್ಮಿಕ ಪವಿತ್ರ ಸ್ಥಳಗಳಲ್ಲಿ ನಡೆಯುತ್ತಿರುವ ಪೂಜೆ, ಪ್ರಾರ್ಥನೆಗಳನ್ನು ನಿಲ್ಲಿಸಲಾಯಿತು. ಅಲ್ಲದೆ ದೇವಸ್ಥಾನಗಳನ್ನು ಧ್ವಂಸ ಮಾಡುವ ಪ್ರಯತ್ನ ನಡೆಯಿತು. ನಗರದ ಶ್ರೀ ಶರಣಬಸವೇಶ್ವರ ದೇವಸ್ಥಾನದ ಮೇಲೆ ರಜಾಕಾರರು ದಾಳಿ ಮಾಡಿದ ಘಟನೆ ಹಲವರಲ್ಲಿ ಆಕ್ರೋಶವನ್ನು ಹುಟ್ಟಿಸಿತು. ಈ ಘಟನೆ ರಾಷ್ಟ್ರನಾಯಕರಾದ ಮಹಾತ್ಮಾ ಗಾಂಧೀಜಿಯವರ ಗಮನಕ್ಕೂ ಬಂದಿತು. ಕ್ರಿ. ಶ. ೧೯೨೪ರಲ್ಲಿ ಬೆಳಗಾಂವದಲ್ಲಿ ಕಾಂಗ್ರೆಸ್



ಅಧಿವೇಶನದಲ್ಲಿ ಭಾಗವಹಿಸಲು ಗಾಂಧೀಜಿಯವರು ಬಂದಾಗ ಕರ್ನಾಟಕದ ಹಲವು ಭಾಗಗಳಿಗೆ ಭೇಟಿಕೊಟ್ಟು ಜನರಲ್ಲಿ ರಾಷ್ಟ್ರೀಯ ಭಾವನೆಗಳಿಗೆ ಸ್ಫೂರ್ತಿ ನೀಡಿದರು.

ಕ್ರಿ. ಶ. ೧೯೨೪ರಲ್ಲಿ ಗಾಂಧೀಜಿಯವರು ಕಲಬುರಗಿ ನಗರಕ್ಕೆ ಭೇಟಿಕೊಟ್ಟು ಇಲ್ಲಿಯ ಗುಜರಾತ ಮೂಲಕ ವ್ಯಾಪಾರಸ್ಥರಾದ ಶೇಠ ಹೀರಾಲಾಲ್ ಭೋಗಮಲ್ ಅವರ ಮನೆಯಲ್ಲಿ ಒಂದು ದಿನ ವಾಸ್ತವ್ಯ ಹೂಡಿದರು. ಅವರನ್ನು ಕಾಣಲು ಹಲವು ನಾಯಕರು ಬಾಲ್‌ಫಾಟ್ ಕಂಪೌಂಡ್‌ನಲ್ಲಿ ಬಂದು ಸೇರಿದರು. ಇಲ್ಲಿಯ ಸ್ಥಿತಿಗತಿಯನ್ನು ಗಾಂಧೀಜಿಯವರಿಗೆ ವಿವರಿಸಿದರು. ಅವರಿಂದ ಮಾಹಿತಿ ಪಡೆದ ಗಾಂಧೀಜಿಯವರು ಮಾರನೆ ದಿನ ಬೆಳಿಗ್ಗೆ ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಅಂದಿನ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪ ಅವರನ್ನು ಭೇಟಿಯಾಗಿ ಅವರಿಂದ ಮಾಹಿತಿಯನ್ನು ಪಡೆದರು. ನಂತರ ನೂತನ ವಿದ್ಯಾಲಯಕ್ಕೆ ಭೇಟಿಕೊಟ್ಟು ಸ್ಥಳೀಯರಿಂದ ಮಾಹಿತಿ ಪಡೆದು ನಿಜಾಮ ಸರಕಾರದ ದೌರ್ಜನ್ಯವನ್ನು ಖಂಡಿಸಿದರು. ಇದೇ ವಿಚಾರಗಳನ್ನು ಗಾಂಧೀಜಿಯವರು ತಮ್ಮ ಹರಿಜನ (ಯಂಗ್ ಇಂಡಿಯಾ) ಪತ್ರಿಕೆಯಲ್ಲಿ "ಗುಲಬರ್ಗಾ ಗಾನ್ ಮ್ಯಾಡ್" ಎಂಬ ಶೀರ್ಷಿಕೆಯಲ್ಲಿ ೧೯೨೪ ಆಗಸ್ಟ್ ೨೮ರ ಸಂಚಿಕೆಯಲ್ಲಿ ಪ್ರಕಟಿಸಿದರು. ಈ ವಿಚಾರಗಳಿಂದ ಪ್ರಭಾವಿತರಾದ ಸ್ಥಳೀಯರು ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಲು ಮುಂದೆ ಬಂದರು.

ಕ್ರಿ. ಶ. ೧೯೩೮ರ ಕಾಲಮಾನ ಕಲಬುರಗಿಯ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮೈಲುಗಲ್ಲಾಗಿದೆ. ಕಾರಣ ಆರ್ಯಸಮಾಜದ ಸಾವಿರಾರು ಕಾರ್ಯಕರ್ತರು ಬೀದರ್, ಕಲಬುರಗಿ, ರಾಯಚೂರು ಜಿಲ್ಲೆಗಳ ಹಲವು ಭಾಗಗಳಲ್ಲಿ ಸಾಮಾಜಿಕ–ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಜನರನ್ನು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸುವಂತೆ ಮಾಡಿದರು. ಆರ್ಯಸಮಾಜದ ಪ್ರಮುಖ ನಾಯಕರು ಕಲಬುರಗಿಯಲ್ಲಿ ಹಿಂದೂ ಮಹಾಸಭಾದ ಸಭೆಗಳನ್ನು ಸಂಘಟಿಸಲು ಪ್ರಾರಂಭಿಸಿದರು. ಆಗ ಅವರನ್ನು ಪೊಲೀಸರು ಬಂಧಿಸಿ ಶಿಕ್ಷೆ ವಿಧಿಸಿದರು. ಹೈದ್ರಾಬಾದ್‌ನಲ್ಲಿ ಸ್ವಾಮಿ ದಯಾನಂದ ತೀರ್ಥರು ನಿಜಾಮ ಸರಕಾರದ ದೌರ್ಜನ್ಯವನ್ನು ಜನರಿಗೆ

ತಿಳಿಸುತ್ತಾ ಹೈದ್ರಾಬಾದ್ ಕರ್ನಾಟಕದ ಹಲವು ಭಾಗಗಳಲ್ಲಿ ಸಂಚಾರ ನಡೆಸಿ ಸ್ವಾತಂತ್ರ್ಯ ಚಳುವಳಿಗೆ ಒಂದು ರೂಪವನ್ನು ನೀಡಿದರು. ಹೈದ್ರಾಬಾದ್‌ನಲ್ಲಿ ನೆಲೆಸಿರುವ ಕನ್ನಡಿಗರಲ್ಲಿ ಹಾಗೂ ಹಿಂದೂಗಳಲ್ಲಿ ರಾಷ್ಟ್ರಪ್ರೇಮವನ್ನು ಹೆಚ್ಚಿಸಿದರು. ಕ್ರಿ. ಶ. ೧೯೩೮ ಅಕ್ಟೋಬರ್ ೨೪ ರಂದು 'ಹೈದ್ರಾಬಾದ್ ರಾಜ್ಯ ಕಾಂಗ್ರೆಸ್' ಪ್ರಥಮ ಅಧಿವೇಶನ ಹೈದ್ರಾಬಾದ್‌ನಲ್ಲಿ ಆಯೋಜಿಸಲಾಯಿತು. ಇದನ್ನು ಗಮನಿಸಿದ ನಿಜಾಮ ಸರಕಾರ ಅದರ ಪದಾಧಿಕಾರಿಗಳನ್ನು ಸೆರೆಮನೆಗೆ ತಳ್ಳಿತು. 'ಕಾಂಗ್ರೆಸ್' ಇದು ಕಾನೂನುಬಾಹಿರ ಸಂಸ್ಥೆ ಎಂದು ಘೋಷಿಸಿತು. ಆಗ ಇದರ ಪದಾಧಿಕಾರಿಗಳು ಕಾಂಗ್ರೆಸ್ ಎನ್ನುವ ಪದವನ್ನು ತೆಗೆದು "ಹೈದ್ರಾಬಾದ್ ಸಾರ್ವಜನಿಕ ಸಮಿತಿ" ಎಂದು ಮರುನಾಮಕರಣ ಮಾಡಿ ತನ್ನ ಚಟುವಟಿಕೆಗಳನ್ನು ಮತ್ತೆ ಆರಂಭಿಸಿತು.

ರಮಾನಂದ ತೀರ್ಥರು ಸ್ಥಳೀಯ ನಾಯಕರ ಸಹಾಯ–ಸಹಕಾರದೊಂದಿಗೆ ಸತ್ಯಾಗ್ರಹ ಆರಂಭಿಸಿದರು. ಕ್ರಿ. ಶ. ೧೯೩೭ ರಿಂದ ೧೯೩೯ರವರೆಗೆ ಈ ಸಮಿತಿಯ ನಾಯಕರಾದ ಗುದ್ಲೆಪ್ಪ ಹಳ್ಳಿಕೇರಿ, ಅಂದಾನಪ್ಪ, ಗೋವಿಂದರಾವ ನಾನಲ್ ಮುಂತಾದವರು ಕಲಬುರಗಿ ಭಾಗದಲ್ಲಿ ಸಂಚಾರ ಕೈಗೊಂಡು ಸ್ಥಳೀಯರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಮೂಡಿಸಿದರು. ಇವರಿಂದ ಪ್ರೇರೇಪಿತರಾದ ಕಲಬುರಗಿಯ ನಾಯಕರಾದ, ದತ್ತಾತ್ರೇಯ ಅವರಾದಿ, ಪ್ರೊ. ದೇವಳಗಾಂವಕರ್, ಕೊಳ್ಳುರು ಮಲ್ಲಪ್ಪ, ನಾರಾಯಣರಾವ ಕನ್ಯಾಳ, ಸರ್ದಾರ್ ಶರಣಗೌಡ ಇನಾಮದಾರ್, ಜಗನಾಥರಾವ ಚಂದ್ರಕಿ, ಹನುಮಂತರಾವ ಕಕ್ಕೇರಿ, ಅಣ್ಣಾರಾವ ಪಾಟೀಲ ಮುಂತಾದವರು ಜಿಲ್ಲೆಯಲ್ಲಿ ಸಂಚರಿಸಿ ಸ್ವಾತಂತ್ರ್ಯ ಚಳುವಳಿಯನ್ನು ಪ್ರಚಾರ ಮಾಡಿದರು.

ಕ್ರಿ. ಶ. ೧೯೩೮ರಲ್ಲಿ ಆರ್ಯಸಮಾಜದ ಚಟುವಟಿಕೆಗಳು ಭರದಿಂದ ಸಾಗಿದವು. ಹೋಳಿಹಬ್ಬದ ಸಂದರ್ಭದಲ್ಲಿ ಹಿಂದೂ–ಮುಸ್ಲಿಂರ ಮಧ್ಯೆ ಗಲಭೆ ಸಂಭವಿಸಿತು. ಇದರಲ್ಲಿ ಒಬ್ಬ ಮುಸ್ಲಿಂ ಹತನಾದನು. ಇದರಿಂದ ಕ್ರೋಧಗೊಂಡ ಸರಕಾರ ಹಲವು ಹಿಂದೂಗಳನ್ನು ಸೆರೆಹಿಡಿದು ಶಿಕ್ಷೆಗೆ ಗುರಿಪಡಿಸಿದರು. ಕಲಬುರಗಿಯ ಲಾಲ್‌ಸಿಂಗ್, ವಿಜಯಪಾಲ, ಹಣಮಂತರಾಯ ಶರಣಪ್ಪ ಬೈರಪ್ಪ ಮುಂತಾದವರು ಜೈಲು ಶಿಕ್ಷೆಯನ್ನು ಅನುಭವಿಸಿದರು. ಜೈಲುಗಳು ಹಿಂದೂ ಕಾರ್ಯಕರ್ತರಿಂದ ತುಂಬಿದವು.



ಚಂದ್ರಮೋಹನ ಬೆಲ್ದಾಳ, ಸೂರಜ್‌ಕಾಂತ ತಿವಾರಿ, ವಿದ್ಯಾಧರ ಗುರೂಜಿ, ಶಿವಕುಮಾರ ಶಾಸ್ತ್ರಿ, ಧರ್ಮವೀರ ಗಂಪಾ, ಅಮರಸಿಂಗ್ ರಾಠೋಡ, ಗಿರಿಧರರಾವ ಜವಳಕರ, ವಿಠಲರಾವ ಪವಾರ, ದತ್ತಾತ್ರೇಯ ಅವರಾದಿ ಮುಂತಾದವರು ಜೈಲು ಶಿಕ್ಷೆ ಅನುಭವಿಸಿದರು.

## ಸತ್ಯಾಗ್ರಹ ಚಳುವಳಿ (ಕ್ರಿ. ಶ. ೧೯೩೮):

ಸತ್ಯಾಗ್ರಹ ಚಳುವಳಿಯನ್ನು ಗಾಂಧೀಜಿಯವರು ಕ್ರಿ. ಶ. ೧೯೩೮ರಲ್ಲಿ ಆರಂಭಿಸಿದರು, ಹೈದರಾಬಾದ್ ಸಂಸ್ಥಾನದಲ್ಲಿಯೂ ಕೂಡ ಸತ್ಯಾಗ್ರಹ ಚಳುವಳಿಯು ಕ್ರಿ. ಶ. ೧೯೩೮ರಲ್ಲಿ ಪ್ರಾರಂಭವಾಯಿತು. ಪ್ರತಿಯೊಬ್ಬರೂ ಸತ್ಯಾಗ್ರಹ ಚಳುವಳಿಯನ್ನು ಸ್ವಾಗತಿಸಲಾಯಿತು. ಕೆಲವೊಂದು ಜನರನ್ನು ಬಿಟ್ಟರೆ ಸತ್ಯಾಗ್ರಹದ ಕಲ್ಪನೆಗೆ ಸಾರ್ವತ್ರಿಕ ಬೆಂಬಲ ಇದ್ದರೂ ಕೂಡ ವೈಯಕ್ತಿಕ ಪಾತ್ರದ ಪ್ರಶ್ನೆ ಬಂದಾಗ ಮಾತ್ರ ವ್ಯಕ್ತಿಗಳ ಉತ್ಸಾಹ ಕುಗ್ಗುತ್ತಿತ್ತು. ಆದರೂ ಕೂಡ ಸತ್ಯಾಗ್ರಹದ ಯಶಸ್ಸು ಸಂಖ್ಯೆಯನ್ನು ಅವಲಂಬಿಸದು. ಕಾಲ ಪಕ್ವವಾಗಿದ್ದು ಧುಮುಕುವುದಂತೂ ಅತ್ಯವಶ್ಯಕವಾಗಿತ್ತು.

ಸಂಸ್ಥಾನದ ಒಳಹೊರಗಿನ ರಾಜಕೀಯ ವರ್ಗಗಳಲ್ಲಿ ಚಟುವಟಿಕೆಗೆ ಆರಂಭವಾಯಿತು. ಸಂಸ್ಥಾನದಲ್ಲಿ ಮತೀಯ ಗುಂಪುಗಳಿದ್ದವು. ಸತ್ಯಾಗ್ರಹದ ಆರಂಭಕ್ಕೆ ತಾರೀಖು ಗೊತ್ತುಪಡಿಸಿದಾಗ ಅವರು ನನ್ನನ್ನು ಭೇಟಿಯಾದರು. ಲಾತೂರ್ ಸಮ್ಮೇಳನದಲ್ಲಿ ನಿರ್ಧಾರವಾದಂತೆ ಮಹಾರಾಷ್ಟ್ರ ಸಮ್ಮೇಳನದ ಆಶ್ರಯದಲ್ಲಿ ಸತ್ಯಾಗ್ರಹ ನಡೆಸುವುದಾದಲ್ಲಿ ಅವರು ಚಳುವಳಿಯಲ್ಲಿ ಭಾಗವಹಿಸುವುದಾಗಿಯೂ ಹೈದರಾಬಾದ್ ಸಂಸ್ಥಾನೀ ಕಾಂಗ್ರೆಸ್ಸಿನ ಪ್ರತಿಬಂಧದ ವಿರುದ್ಧ ನಡೆವ ಸತ್ಯಾಗ್ರಹದಲ್ಲಿ ಮಾತ್ರ ಭಾಗವಹಿಸುವಂತೆ ಅವರು ತಿಳಿಸಿದರು. ಇಡೀ ಸಂಸ್ಥಾನದ ಪರವಾಗಿ ಚಳುವಳಿ ನಡೆಸಲಾಗುವುದೆಂದೂ ಯಾವುದೇ ಒಂದು ಪ್ರದೇಶದ ಪರವಾಗಿ ಅಲ್ಲವೆಂದು ವಾದಿಸಿದೆ. ಹಿಂದೂ ಸಿವಿಲ್ ಲಿಬರ್ಟಿಸ್ ಯೂನಿಯನ್ನು ಸ್ಥಾಪಿಸಲಾಗಿದ್ದು ಸತ್ಯಾಗ್ರಹವನ್ನು ಹೂಡಲಾಗುವುದೆಂದು ಪ್ರಕಟಣೆಯನ್ನೂ ನೀಡಿದರು. ನಿಶ್ಚಿತ ದಿನ ಸತ್ಯಾಗ್ರಹವೂ ಆಯಿತು ಎಂದು ಸ್ವಾಮಿ ರಮಾನಂದ ತೀರ್ಥರು ತಮ್ಮ ಹೋರಾಟದ ನೆನಪುಗಳು ಕೃತಿಯಲ್ಲಿ ತಿಳಿಸಿದ್ದಾರೆ.

- ಶುದ್ಧ ಧಾರ್ಮಿಕ ಸಂಸ್ಥೆಯಾದ ಹೈದರಾಬಾದ್‌ನ ಆರ್ಯಸಮಾಜವೂ ಧಾರ್ಮಿಕ ಸ್ವಾತಂತ್ರ್ಯದ ಗಳಿಕೆಗಾಗಿ ಚಳವಳಿ ನಡೆಸಬಯಸಿತ್ತು.
- ದಬ್ಬಾಳಿಕೆಯ ಹಸ್ತದ ಪ್ರಹಾರ ಹಲವು ವರ್ಷಗಳಿಂದ ಅವರ ಮೇಲೆ ಸಾಗಿತ್ತು.
- ಓಂ ಧ್ವಜಗಳನ್ನು ಸೂಡಲಾಗಿತ್ತು, ಹವನಕುಂಡಗಳ ಪಾವಿತ್ರ್ಯ ಕೆಡಿಸಲಾಗಿತ್ತು.
- ಆರ್ಯಸಮಾಜ ಮಂದಿರಗಳ ಮೇಲೆ ದಾಳಿಮಾಡಿ, ಅನೇಕ ಕಾರ್ಯಕರ್ತರನ್ನು ಹಿಂಸೆಗೂ ಹೊಡೆತಕ್ಕೂ ಒಳಪಡಿಸಿ ಅವರನ್ನು ನಾನಾ ರೀತಿಯ ಅವಮಾನಕ್ಕೆ ಗುರಿಮಾಡಿದ್ದರು.
- ಮುಸ್ಲಿಂ ಜಾತೀಯ ಭ್ರಮಾವೇಶವನ್ನು ಎದುರಿಸಲು ಅವರು ವ್ಯವಸ್ಥಿತ ಸಂಘಟನೆ ಕಟ್ಟಿದ್ದರು. ಅವರಿಗೆ ಅಖಿಲಭಾರತ ಸಂಘಟನೆಯ ಬೆಂಬಲವಿತ್ತು.

ಆ ಕಾಲದ ಆರ್ಯ ಸಮಾಜದ ನಾಯಕರಲ್ಲಿ ಪಂಡಿತ್ ನರೇಂದ್ರಜಿ ನನ್ನ ಗಮನವನ್ನು ತೀರಾ ಸೆಳೆದ ವ್ಯಕ್ತಿ. ಆ ಮೊದಲು ಅವರ ವೈಯಕ್ತಿಕ ಸಂಪರ್ಕದ ಸಂದರ್ಭ ನನಗೆ ಬಂದಿರಲಿಲ್ಲ. ಅವರು ಅಮೂಲಾಗ್ರ ಬಂಡುಕೋರರಾಗಿದ್ದು ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ ಪ್ರಕಟಿಸುತ್ತಿದ್ದರು. ಅಷ್ಟೇ ಅಲ್ಲದೆ ಅವರು ಪ್ರಭಾವೀ ಭಾಷಣಕಾರರಾಗಿದ್ದು, ಜನಸೇವೆಗಾಗಿ ಜೀವನವನ್ನು ಮೀಸಲಿಟ್ಟವರು.

ಸತ್ಯಾಗ್ರಹ ಆರಂಭಿಸಬೇಕೆನ್ನುವ ನಾವೆಲ್ಲ ರಾಷ್ಟ್ರೀಯವಾದಿಗಳು. ನಮ್ಮ ಮೂಲಭೂತ ಕಲ್ಪನೆಯಂತೆ ನಡೆಯಬೇಕಾದಲ್ಲಿ ನಮ್ಮ ಪಾಡಿಗೆ ನಾವು ಸಾಗಬೇಕೆಂಬುದು ನಮಗೆ ಮನವರಿಕೆಯಾಗಿತ್ತು. ಹೈದರಾಬಾದ್ ಸಂಸ್ಥಾನೀ ಕಾಂಗ್ರೆಸ್ಸಿನ ಮೇಲೆ ಹೇರಿದ ಪ್ರತಿಬಂಧದ ಹಿನ್ನಲೆಯಲ್ಲೇ ಸತ್ಯಾಗ್ರಹ ನಡೆಸಲಾಗುವುದೆಂದೂ ಸತ್ಯಾಗ್ರಹದ ರಾಷ್ಟ್ರೀಯ ಸ್ವರೂಪವನ್ನು ಕೆಡಿಸಬಯಸುವುದಿಲ್ಲವಾಗಿಯೂ ನಾವು ಆರ್ಯಸಮಾಜ ಹಾಗೂ ಹಿಂದೂ ಮಹಾಸಭಾದ ಘಟಕಗಳಿಗೆ ತಿಳಿಸಿದೆವು. ಹಿಂದೂ ಮತೀಯ ವರ್ಗಗಳು ಸತ್ಯಾಗ್ರಹವನ್ನು ಎರಡು ದಿನ ಮುಂಚೆಯೇ ಆರಂಭಿಸಿದವು; ಆರ್ಯಸಮಾಜದ ಇಡೀ ಸಂಘಟನೆ ಕೆಲವು ದಿನಗಳ ನಂತರ ಧುಮುಕಿತು; ಹೈದರಾಬಾದ್ ಸಂಸ್ಥಾನ ಕಾಂಗ್ರೆಸ್ ತನ್ನ ಪ್ರಥಮ ಸತ್ಯಾಗ್ರಹವನ್ನು ತಾರೀಖು ೨೪–೧೦–೧೯೩೮ ರಂದು ಹೂಡಿತು.

ಶ್ರೀ ನಾನಲರು ರಾಜಕೀಯ ಮನೋವೃತ್ತಿಯ ವ್ಯಕ್ತಿ. ಚಳುವಳಿಯನ್ನು ಆರಂಭಿಸಲು ಒಂದು ಶುಭದಿನವನ್ನು ಗೊತ್ತು ಪಡಿಸಬೇಕೆಂದು ಅವರ ಬಯಕೆ. ಅಂಥ ವಿಚಾರಗಳಲ್ಲಿ ಬಹುಜನಕ್ಕೆ ನಂಬುಗೆ ಇರದಿದ್ದರೂ ನಾವು ಅವರ ಇಚ್ಛೆಯನ್ನು ನಡೆಸಬೇಕಾಗುತ್ತದೆ ದೀಪಾವಳಿಯ ಮೊದಲ ದಿನವನ್ನು ಸತ್ಯಾಗ್ರಹದ ತೇದಿಯಾಗಿ ಗೊತ್ತು ಮಾಡಿದೆವು. ಸುಲ್ತಾನ್ ಬಜಾರ್ ಭಾಗದ ತಂತಿಕಚೇರಿಯ ಸಮೀಪದ ಸ್ಥಳದಲ್ಲಿ ಬೆಳಗ್ಗೆ ೧೦ ಗಂಟೆಗೆ ಸಾವಿರಾರು ಜನರ ಎದುರು ಹೈದರಾಬಾದ್ ಕಾಂಗ್ರೆಸ್ಸಿನ ರಚನೆಯನ್ನು ಘೋಷಿಸಿ ತಾವು ಅದರ ಅಧ್ಯಕ್ಷರೆಂದೂ ನಾಲ್ಕು ಇತರ ಜೊತೆಗಾರರು ಸದಸ್ಯರೆಂದೂ ಪ್ರಕಟಿಸಿದರು. ಹೈದರಾಬಾದ್ ಸ್ವಾತಂತ್ರ್ಯ ಚಳವಳಿಯಲ್ಲಿ ಸರ್ವಸ್ವತ್ಯಾಗ ಮಾಡಿದ ಕೆಲವೇ ತರುಣರಲ್ಲಿ ಶ್ರೀ ಬೋರಿಕರ್ ಅವರನ್ನು ಗಣಿಸಬಹುದು. ಆಗ ಮತ್ತು ಮುಂದಿನ ಚಳವಳಿಯಲ್ಲಿ ಅವಶ್ಯ ನಾಯಕತ್ವದ ನಿರ್ಮಾಣಕ್ಕೆ ಸಾಧನವಾಗಿ ಅವರಿದ್ದರು.

ಸತ್ಯಾಗ್ರಹ ಚಳುವಳಿಯ ಬಗ್ಗೆ ಸಂಸ್ಥಾನಿ ಪೋಲೀಸರಿಗೆ ಏನೆಂದೂ ಕಲ್ಪನೆ ಇರಲಿಲ್ಲ. ಈ ಶಾಂತಿಯುತ ಕ್ರಮದ ಮಹತ್ವ ಅವರಿಗೆ ತಿಳಿಯಲಾರದ್ದು. ಕೆಲವು ಕಾಲ ಏನು ಮಾಡಬೇಕೆಂದೂ ತಿಳಿಯದೆ ಅವರು ಇದ್ದರು. ಬಹುಶಃ ಜನ ರೊಚ್ಚಿಗೇಳುವುದನ್ನು ಅವರು ಕಾಯುತ್ತಿದ್ದರು. ಆದರೆ ಜನ ಶಾಂತಿ, ಶಿಸ್ತುಗಳಿಂದ ನಡೆದುಕೊಂಡರು. ಪ್ರಥಮ ಕಾರ್ಯಸಮಿತಿಯನ್ನು ಬಂಧಿಸಬೇಕೆಂದು ಕೊನೆಯ ಹಂತದಲ್ಲಿ ಸೂಚನೆ ನೀಡಿದಂತೆ ಇತ್ತು. ಇದರಂತೆ ಸತ್ಯಾಗ್ರಹಿಗಳನ್ನು ಚಂಚಲಗುಡ್ಡ ಸೆಂಟ್ರಲ್ ಜೈಲಿಗೆ ನಡೆಸಿಕೊಂಡು ಹೋದರು. ನಂತರ ತಾರೀಖು ೨೭–೧೦–೧೯೩೮ ರಂದು ಸತ್ಯಾಗ್ರಹ ಮಾಡಿದೆ.

ದೇಶಾದ್ಯಂತ ಕಾಂಗ್ರೆಸ್ ನಾಯಕರು ಚಳವಳಿಯನ್ನು ಸ್ವಾಗತಿಸಿ ಅಭಿನಂದನಾಪರ ತಂತಿ ಕಳುಹಿಸಿದರು. ಅವರ ಉತ್ಸಾಹ ಭಾರಿಯಾಗಿತ್ತು. ಶ್ರೀ ಎಚ್. ಸಿ. ಹೇಡಾ, ಶ್ರೀ ಡಿ. ಜಿ. ಬಿಂದು ಹಾಗೂ ಶ್ರೀ ಮಂಡಮೂಲ ರಾಮಚಂದ್ರರಾವ್ ಇವರಿಗೆ ಮುಂದಿನ ಯೋಜನೆಗಳ ಜವಾಬ್ದಾರಿ ಒಪ್ಪಿಸಿದ್ದು ಶ್ರೀ ಜಿ. ಎಂ. ಸರಾಫರಿಗೆ ಮರಾಠವಾಡಾ ಪ್ರದೇಶದ ಜವಾಬ್ದಾರಿ ನೀಡಿದೆವು. ಔರಂಗಾಬಾದ್ ಚಳವಳಿಯ ಎರಡನೆಯ ಕೇಂದ್ರವಾಗಿತ್ತು. ತದನಂತರ ತಂಡ

ಜೈಲು ಸೇರಿದವು. ಪೂರ್ವಯೋಜನೆಯಂತೆ ಕೆಲಸ ಸಾಗಿತು. ಮೊದಲ ತಿಂಗಳಲ್ಲಿ ಹೈದರಾಬಾದ್ ನಗರವೊಂದೇ ಕೇಂದ್ರವಾಗಿದ್ದು ಜನ ಸತ್ಯಾಗ್ರಹ ನಡೆಸಲು ನಗರಕ್ಕೆ ಬಂದಿದ್ದರು. ಇದರ ಪ್ರಭಾವದಿಂದ ಕಲಬುರಗಿಯ ನಾಯಕರು ನಿರಂತರವಾಗಿ ಹೈದ್ರಾಬಾದ್ ಕೇಂದ್ರದೊಂದಿಗೆ ಸಂಪರ್ಕ ಇಟ್ಟುಕೊಂಡು ಈ ಭಾಗದಲ್ಲಿ ಸತ್ಯಾಗ್ರಹ ನಡೆಸುತ್ತಿದ್ದರು.

ಮುಂದಿನ ತಿಂಗಳು ಔರಂಗಾಬಾದ್‌ನಲ್ಲಿ ಸತ್ಯಾಗ್ರಹ ನಡೆಸಲು ನಗರಕ್ಕೆ ಬಂದಿದ್ದರು. ಮುಂದಿನ ತಿಂಗಳು ಔರಂಗಾಬಾದ್‌ನಲ್ಲಿ ಸತ್ಯಾಗ್ರಹ. ಯಾವುದೇ ಯೋಜನೆ ಇಲ್ಲದೆ ಸತ್ಯಾಗ್ರಹ ಹೂಡಿದಂತಿದ್ದ ಹಿಂದೂ ಸಿವಿಲ್ ಲಿಬರ್ಟಿಸ್ ಯೂನಿಯನ್‌ನವರಿಗೆ ಸಾಕಷ್ಟು ಬೆಂಬಲವಿಲ್ಲದೆ ಅವರ ಚಳವಳಿ ಹಿಂದೆ ಬಿತ್ತು. ಆರ್ಯಸಮಾಜದ ವ್ಯಕ್ತಿಗಳು ಆಗಾಗ ಸತ್ಯಾಗ್ರಹ ಮಾಡಿದರು. ಏಕೆಂದರೆ ಅವರ ಮುಖ್ಯ ಸಂಸ್ಥೆ ಸಭೆ ಸೇರಿ ಈ ಬಗ್ಗೆ ನಿರ್ಣಯ ಕೈಕೊಂಡಿರಲಿಲ್ಲ. ಕಾಂಗ್ರೆಸ್ಸಿನ ಸತ್ಯಾಗ್ರಹ ಯೋಜನೆಯಂತೆ ಸಾಗಿತು. ಅವರ ತಿಳುವಳಿಕೆಗಾಗಿ ಕರಪತ್ರಗಳನ್ನು ಪ್ರಕಟಿಸಲಾಗುತ್ತಿದ್ದು ಜೈಲಿನೊಳಗಿನ ಸತ್ಯಾಗ್ರಹಿಗಳ ಸಂಖ್ಯೆ ಬೆಳೆಯುತ್ತಲಿತ್ತು.

ಸತ್ಯಾಗ್ರಹದ ಚಳವಳಿಗೆ ಇನ್ನೂ ಹೆಚ್ಚಿನ ಶಕ್ತಿನೀಡಿದ ಇನ್ನೊಂದು ಮಹತ್ವದ ಘಟನೆಯ ವಿಚಾರ ಹೇಳುವುದು ಉಚಿತ. ಮುಸ್ಲಿಂ ಜಾತೀಯವಾದದಿಂದ ತುಂಬಿ ತುಳುಕುತ್ತಿದ್ದ ಹೈದರಾಬಾದ್‌ನಂಥ ರಾಜ್ಯದಲ್ಲಿ ಶ್ರೀ ತಿರ್ಮಿಜಿಯವರಿಗಿದ್ದ ಅಸಾಧಾರಣ ಧೈರ್ಯ ಮತ್ತು ಆಳವಾದ ಶ್ರದ್ಧೆಗಳೇ ಅವರಿಗೆ ಗಣ್ಯಸ್ಥಾನ ಒದಗಿಸಿದವುಗಳು. ಜಾತೀಯವಾದದ ವಿರುದ್ಧ ಅವರು ಅವಿಶ್ರಾಂತ ಹೋರಾಟ ನಡೆಸಿದ್ದು ಮತೀಯತೆಯ ವಿರುದ್ಧ ಧ್ವನಿ ಎತ್ತಿದವರು ಅವರೊಬ್ಬರೇ. ಅವರು ಪ್ರಭಾವಿ ಭಾಷಣಕಾರರು. ಜಾತ್ಯಾತೀತತೆಯ ಕಲ್ಪನೆಗೆ ಬಲವಾಗಿ ಕಟ್ಟು ಬಿದ್ದವರು. ಇದರಿಂದಾಗಿ ಮುಸ್ಲಿಂ ಜಾತೀಯ ವಾದಿಗಳ ಕೈಯಲ್ಲಿ ಅವರು ಅವಮಾನಕರ ಪ್ರಸಂಗಗಳನ್ನು ಎದುರಿಸಬೇಕಾಯಿತು. ಕೊನೆಯುಸಿರವರೆಗೂ ಅವರು ರಾಷ್ಟ್ರೀಯವಾದಿಗಳಾಗಿದ್ದರು ಎಂದು ಸ್ವಾಮಿ ರಮಾನಂದ ತೀರ್ಥರು ಹೈದರಾಬಾದ್ ಸಂಸ್ಥಾನದಲ್ಲಿ ನಡೆದ ಸತ್ಯಾಗ್ರಹ ಚಳುವಳಿಯನ್ನು ಕುರಿತು ತಮ್ಮ ಹೋರಾಟದ ನೆನಪುಗಳು ಎಂಬ ಕೃತಿಯಲ್ಲಿ ಬರೆದುಕೊಂಡಿದ್ದಾರೆ.



**ವಂದೇ ಮಾತರಂ ಚಳುವಳಿ:**

ವಂದೇ ಮಾತರಂ ಚಳುವಳಿ ಕಿಚ್ಚು ಮೊದಲು ತಗಲಿದ್ದು ವಿದ್ಯಾರ್ಥಿಗಳ ಸಮುದಾಯಕ್ಕೆ ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಇಸ್ಲಾಂ ಧರ್ಮದ ದೀನಿಯಾತ ಅಥವಾ ಆಸಫ್‌ಝಾ ಮನೆತನದ ಸ್ತುತಿಗಾನ ಪ್ರಾರ್ಥನೆ ಮಾಡಬೇಕಾದುದು ನಿಯಮವಾಗಿತ್ತು.

ಸಂಸ್ಥಾನದಲ್ಲಿ ವಂದೇಮಾತರಂ ಹಾಡಲು ಸರ್ಕಾರ ನಿರ್ಬಂಧ ಹಾಕಿದರು. ಇದು ಹಿಂದೂ ವಿದ್ಯಾರ್ಥಿಗಳಿಗೆ ಸಮಂಜಸವೆನಿಸದೆ ಆಗಿನ ರಾಷ್ಟ್ರೀಯತೆಯ ತಾರಕಮಂತ್ರವಾಗಿದ್ದ ವಂದೇಮಾತರಂ ಹಾಡಲು ಅವಕಾಶಕೊಡಬೇಕೆಂದು ಒತ್ತಾಯಿಸಿದರು ಮತ್ತು ಹಾಡಿದರು. ಹೈದರಾಬಾದಿನಲ್ಲಿ ಈ ಹೋರಾಟದ ಮುಖಂಡತ್ವವನ್ನು ‘ವಂದೇಮಾತರಂ ರಾಮಚಂದ್ರರಾವ್’ ಎಂಬ ಧೀರೋದ್ಧಾತ್ತ ನಾಯಕರು ವಹಿಸಿದ್ದರು. ಇವರು ಅಮರರಾದ ಸ್ಫೂರ್ತಿಯೇ ಗುಲಬರ್ಗಾದಲ್ಲಿ ವಂದೇ ಮಾತರಂ ಚಳವಳಿಗೆ ಪುಷ್ಟಿನೀಡಿತು. ಗುಲಬರ್ಗಾದ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಧಾರವಾಡಕರ ಮಾಸ್ತರ್ ಎಂಬುವವರು ಅತೃಪ್ತ ಹಿಂದೂ ವಿದ್ಯಾರ್ಥಿಗಳಿಗೆ ವಂದೇಮಾತರಂ ಹಾಡಲು ಅವಕಾಶಕೊಟ್ಟರು. ಇದಕ್ಕಾಗಿ ಧಾರವಾಡಕರ ಮಾಸ್ತರ್ ಬಂಧಿಸಲಾಯಿತು. ಇದರಿಂದ ಈ ವಂದೇಮಾತರಂ ಚಳುವಳಿಯು ರಾಜ್ಯಾದ್ಯಂತ ಹರಡಿ ಜನಪ್ರಿಯವಾದುದೇ ಅಲ್ಲದೇ ಹಿಂದೂ ಮಹಾಸಭಾದ ಭಾಪಟ್ ಎಂಬುವವರನ್ನು ಸೊಲ್ಲಾಪುರದ ಸೆರೆಮನೆಯಿಂದ ಬಿಡುಗಡೆ ಮಾಡಿಸುವುದು ಚಳವಳಿಗಾರರ ಉದ್ದೇಶವಾಗಿತ್ತು.

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಜಿ. ಎಂ. ಸರಾಫರು ಈ ವಿಷಯದಲ್ಲಿ ಸರಕಾರದ ಆಜ್ಞೆಯ ವಿರುದ್ಧ ನಡೆದುಕೊಂಡಿದ್ದ ಕಾರಣ ತಮ್ಮ ಹುದ್ದೆ ತ್ಯಜಿಸಬೇಕಾಯಿತು. ಇವರು ‘ವಂದೇ ಮಾತರಂ’ ರಾಷ್ಟ್ರೀಯ ಸಂಘಟನೆಯ ಸಂಕೇತವೆಂದು ಸಾರಿದರು. ಗುಲಬರ್ಗಾದಲ್ಲಿ ಜಗನ್ನಾಥರಾವ್ ಚಂಡರ್ಕಿ ಮತ್ತು ಡಾ. ಪದ್ಮನಾಭ ಪುರಾಣಿಕರವರು ಉಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಾಯಕರಾಗಿದ್ದರಲ್ಲದೇ ವಿದ್ಯಾರ್ಥಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು, ಭಾಗವಹಿಸಿದ ವಿದ್ಯಾರ್ಥಿಗಳನ್ನು

ಶಿಕ್ಷಿಸಿ ಹೊರಹಾಕಲಾಯಿತು. ಹೊರ ಹಾಕಲಾದ ವಿದ್ಯಾರ್ಥಿಗಳಿಗೆ ನಾಗಪುರ ವಿಶ್ವವಿದ್ಯಾಲಯದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಅಲ್ಲಿಯ ಉದಾರ ಮನಸ್ಸಿನ ಉಪಕುಲಪತಿಗಳು ಅವಕಾಶ ನೀಡಿದರು.

'ವಂದೇ ಮಾತರಂ' ರಾಷ್ಟ್ರಗೀತೆಯು ರಾಷ್ಟ್ರೀಯ ಸಂಘಟನೆಯ ಸಂಕೇತವೆಂದು ಸಾರಿದರು. ಗುಲ್ಬರ್ಗಾದ ಜಗನ್ನಾಥರಾವ್ ಚಂದರ್ಕಿ ಮತ್ತು ಡಾ. ಪದ್ಮನಾಭ ಪುರಾಣಿಕ ಆಗ ಉಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಾಯಕರಾಗಿದ್ದರಲ್ಲದೇ ವಿದ್ಯಾರ್ಥಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಗುಲಬರ್ಗಾದ ಕೆಲವು ವಿದ್ಯಾರ್ಥಿ ಮುಖಂಡರುಗಳು ಸಭೆ ಸೇರಿ ಗಾಂಧೀಜಿಯವರು ಇದೇ ಸಮಯದಲ್ಲಿ ಮದರಾಸಿಗೆ ಬಂದಿರುವ ಸುದ್ದಿ ತಿಳಿದು ಅವರನ್ನು ಭೇಟಿ ಮಾಡಲು ತೀರ್ಮಾನಿಸಿದರು. ಇವರಲ್ಲಿ ಶರಣಗೌಡ ಇನಾಮದಾರರು ಸೇರಿದ್ದರು.

ಸರಾದಾರ್ ವೀರಣಗೌಡರು ಪಾಟೀಲ ಮತ್ತು ಮಹಾದೇವ ದೇಸಾಯಿ ಅವರ ಮೂಲಕ ಮದರಾಸಿನಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿದಾಗ ಹೈದರಾಬಾದ್ ಕರ್ನಾಟಕ ಸಂಸ್ಥಾನಿ ಕಾಂಗ್ರೆಸ್‌ಗೆ ರಮಾನಂದ ತೀರ್ಥರನ್ನು ಅಧ್ಯಕ್ಷರನ್ನಾಗಿ ಮಾಡಲು ಗಾಂಧೀಜಿ ಒಪ್ಪಿದರು. ಆದರೆ ಈ ಸಂಸ್ಥೆ ಅಸ್ಥಿತ್ವಕ್ಕೆ ಬಂದ ತಕ್ಷಣ ನಿಷೇಧಗೊಂಡಿತು. ಕ್ರಿ. ಶ. ೧೯೪೦ರ ಮಾರ್ಚ್ ೨ ರಂದು ಪ್ರತಿಬಂಧಿತರಾದ ಸಂಸ್ಥಾನಿ ಕಾಂಗ್ರೆಸ್ಸಿನ ಕೆಲವು ಕಾರ್ಯಕರ್ತರು ಮಹಾತ್ಮಗಾಂಧೀಜಿಯವರ ಸೂಚನೆಯಂತೆ ವೈಯಕ್ತಿಕ ಸತ್ಯಾಗ್ರಹ ಹೂಡಿದರು.

ಸೆರೆಹಿಡಿಯಲಾಗಿದ್ದ ರಮಾನಂದರನ್ನು ಕ್ರಿ. ಶ. ೧೯೪೧ ರ ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡಲಾಯಿತು. ಆಗ ಈ ಸಂಸ್ಥೆಯಲ್ಲಿ ರಮಾನಂದ ತೀರ್ಥರು, ಜನಾರ್ಧನರಾವ್ ದೇಸಾಯಿ, ಮೇಲ್ಕೋಟೆ (ಇವರು ಎ. ಜಿ. ರಾಮಚಂದ್ರರಾವ್ ಅವರ ತಮ್ಮಂದಿರು), ಉಸ್ಮಾನಾಬಾದ್‌ನ ಪುಲಚಂದ್ ಹಾಗೂ ಗಾಂಧೀಜಿಯವರ ಹಲವು ಅನುಯಾಯಿಗಳಿದ್ದರು. ಮುಂದೆ ಎರಡನೇ ಮಹಾಯುದ್ಧ ಪ್ರಾರಂಭವಾದ ಕಾರಣ ಹೈದರಾಬಾದ್ ಕಾಂಗ್ರೆಸ್ ಸಂಸ್ಥೆಯನ್ನು ಪ್ರತಿಬಂಧಗೊಳಿಸಲಾಯಿತು. ತಕ್ಷಣವೇ ಇದರ ನಾಯಕರುಗಳು ಗುಲಬರ್ಗಾದಲ್ಲಿ ಸಭೆ ಸೇರಿ ಈ ಸಂಸ್ಥೆಯನ್ನು 'ಕರ್ನಾಟಕ ಪರಿಷತ್ತು' ಎಂದು ಹೆಸರು ಬದಲಿಸಿ ಜನಾರ್ದನರಾವ್ ದೇಸಾಯಿ ಅವರ ನೇತೃತ್ವದಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದುವರೆಸಿದರು.



ಆರ್ಯ ಸಮಾಜದ ಹೋರಾಟವು ತೀವ್ರಗೊಂಡು ಕ್ರಿ. ಶ. ೧೯೪೧ರ ವೇಳೆಗೆ ಹೈದರಾಬಾದ್ ನಗರದಲ್ಲಿ ಜನಗಳಲ್ಲಿ ದೇಶಾಭಿಮಾನವನ್ನು ಮೂಡಿಸಿತ್ತು. ಈ ವೇಳೆಗಾಗಲೇ 'ರೇಹನ್‌ಮಾಯೇ ದಖನ್' ಎಂಬ ತೀವ್ರಗಾಮಿ ಉರ್ದು ದೈನಂದಿನ ಪತ್ರಿಕೆಯ ಸಂಪಾದಕನಾಗಿದ್ದ ಮಹಮ್ಮದ್ ಸಿದ್ದಿಕಿ ಎಂಬುವನು 'ಇತ್ತೇಹಾದ್–ಉಲ್–ಮುಸ್ಲಿಮೀನ್' ಎಂಬ ಬಂಡಾಯಗಾರರ ಸಂಘವನ್ನು (ಕ್ರಿ. ಶ. ೧೯೪೦) ಸ್ಥಾಪಿಸಿದನು. ಈ ಸಂಸ್ಥೆಯ ಮುಖಂಡತ್ವವನ್ನು ಖಾಸಿಂ ರಜ್‌ವಿ ಎಂಬ ಮತ್ತೊಬ್ಬ ಕಟ್ಟಾ ಮುಸ್ಲಿಂ ನಾಯಕನು ವಹಿಸಿದ್ದನು. ಈ ಸಂಸ್ಥೆಯು ಆರ್ಯಸಮಾಜದ ಚಟುವಟಿಕೆಗಳ ಮೇಲೆ ತನ್ನ ಗಮನ ಹರಿಸಿತು. ಇದೇ ಸಂದರ್ಭದಲ್ಲಿ ಏಪ್ರಿಲ್ ೨೨–೨೪, ೧೯೪೫ ರಂದು ಗುಲಬರ್ಗಾದಲ್ಲಿ ಆರ್ಯ ಸಮಾಜದ ನಾಲ್ಕನೇ ಅಧಿವೇಶನವು ಸಮಾವೇಶಗೊಂಡಿತು. ಇದರ ಅಧ್ಯಕ್ಷತೆಯನ್ನು ರಾಜಾನಾರಾಯಣ ಲಾಲ್ ಪಿಟ್ಟಿ ಅವರು ವಹಿಸಿದ್ದರು. ಪೋಲೀಸರು ಈ ಸಭೆಯ ಮೇಲೆ ಯಾವ ಮುನ್ಸೂಚನೆಯಿಲ್ಲದೆ ದಾಳಿಮಾಡಿ ಪಂಡಿತ್ ವಿನಾಯಕರಾವ್, ಗಣಪತ್ ಶಾಸ್ತ್ರೀ, ಪಂಡಿತ್ ನರೇಂದ್ರಜಿ ಹಾಗೂ ಒಬ್ಬ ಸ್ವಯಂ ಸೇವಕ ಹೀರಾಲಾಲ್ ಪಾಂಡೆ ಮುಂತಾದವರನ್ನು ದಾರುಣವಾಗಿ ಹೊಡೆದರೆಂದು ತಿಳಿದುಬರುತ್ತದೆ. ಲಾಟಿ ಹೊಡೆತದ ಪರಿಣಾಮವಾಗಿ ಪಂಡಿತ್ ನರೇಂದ್ರಜಿಯವರಿಗೆ ಕಾಲು ಮುರಿದು ಹೋಯಿತು.

ಪೋಲೀಸರ ಲಾಟಿ ಚಾರ್ಜ್‌ನಿಂದ ಉಂಟಾದ ಅತೃಪ್ತಿಯು ಗುಲಬರ್ಗಾ ಜಿಲ್ಲಾದ್ಯಂತ ವ್ಯಾಪಕವಾಗಿ ಹರಡಿ ರಾಷ್ಟ್ರೀಯ ಐಕ್ಯತೆಯು ಚುರುಕುಗೊಂಡಿತೆಂದು ಹೇಳಲಾಗುತ್ತದೆ. ಮುಂದೆ ಕ್ರಿ. ಶ. ೧೯೪೬ ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್; ಅವರು ಹೈದರಾಬಾದ್‌ನಲ್ಲಿ ಪ್ರಧಾನ ಮಂತ್ರಿಯಾಗಿ ನೇಮಕಗೊಂಡಾಗ ಹಲವು ರಾಜಕೀಯ ನಿರ್ಬಂಧಗಳು ಸಡಿಲಗೊಂಡವು. ಆರ್ಯಸಮಾಜದವರು ಹೈದರಾಬಾದ್‌ನಲ್ಲಿ 'ಆರ್ಯಭಾನ್' ಎಂಬ ವಾರಪತ್ರಿಕೆಯನ್ನು ಆರಂಭಿಸಲು ಮಿರ್ಜಾ ಅವರೇ ಅನುಮತಿ ನೀಡಿದರು. ಹೀಗೆ ಆರ್ಯಸಮಾಜವು ಸಂಸ್ಥಾನಿ ಹೋರಾಟಗಾರರಲ್ಲಿ ಪರಿಣಾಮಕಾರಿಯಾದ ಸಂಘಟನೆ ಮೂಡಿಸಿದುದು ಗಣನೀಯವಾಗಿದೆ. ಕ್ರಿ. ಶ. ೧೯೪೨ರಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳವಳಿಗೆ ಪೂರ್ವಭಾವಿಯಾಗಿ ಹೈದರಾಬಾದ್‌ನ ನಿಜಾಮರು ಒಂದು ವಿಶೇಷ

ಶಾಂತಿ ಒಪ್ಪಂದವನ್ನು ಸತ್ಯಾಗ್ರಹಿಗಳೊಡನೆ ಮಾಡಿಕೊಂಡು ತನ್ನ ಸರಕಾರದ ಪ್ರತಿನಿಧಿ ಸಭೆಯಲ್ಲಿ ಹಿಂದೂ ಮತ್ತು ಮುಸ್ಲಿಮರಿಗೆ ತಲಾ ೫೦ ಸ್ಥಾನಗಳನ್ನು ನೀಡಿದರು. ಇದಕ್ಕೆ ಸತ್ಯಾಗ್ರಹಿಗಳು ಒಪ್ಪಿದರು.

ಹೈದರಾಬಾದ್ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಭದ್ರ ಬುನಾದಿಯಲ್ಲಿ ನಿಲ್ಲಿಸಲು ಈ ಚಳುವಳಿ ಕಾರಣವಾಯಿತು. ಸುಶಿಕ್ಷಿತ ತರುಣರು ರಾಷ್ಟ್ರೀಯತೆಯ ಪ್ರೇರಣೆ ಪಡೆದರಲ್ಲದೆ ಒಂದು ಉದಾತ್ತ ಧ್ಯೇಯಕ್ಕಾಗಿ ಕಷ್ಟಗಳನ್ನು ಸಹಿಸಿಕೊಂಡು ಮುಂದಿನ ದಿನಗಳಲ್ಲಿ ಈ ಜ್ಯೋತಿ ಇನ್ನಷ್ಟು ಪ್ರಜ್ವಲಿತವಾಯಿತು. ಅವರು ರಾಷ್ಟ್ರೀಯವಾದಿ ಶಕ್ತಿಗಳ ಜೊತೆ ಸೇರಿದ್ದು ಹೈದರಾಬಾದ್ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿನ ಒಂದು ಗಣ್ಯ ಅಧ್ಯಾಯವಾಗಿದೆ. ಬರಲಿರುವ ಸ್ವಾತಂತ್ರ್ಯ ಚಳವಳಿಯಲ್ಲಿ ಅವರು ಇನ್ನೂ ಉದಾತ್ತಪಾತ್ರವನ್ನು ವಹಿಸುವುದಿತ್ತು. ಈ ತರುಣ ದೇಶಭಕ್ತ ಆತ್ಮಗಳ ಜೊತೆ ದೀರ್ಘಕಾಲ ಸಂಬಂಧ ಹೊಂದಿದ್ದುದು ನನಗೆ ಸಂತಸದ ವಿಷಯವಾಗಿತ್ತು. ಇಡೀ ಒಂದು ತರುಣರ ಪೀಳಿಗೆಯ ಮೇಲೆ 'ವಂದೇಮಾತರಂ' ಚಳವಳಿ ಆಳವಾದ ಪ್ರಭಾವ ಬೀರಿತು. ಅನೇಕ ವಿದ್ಯಾರ್ಥಿಗಳ ಜೀವನದಲ್ಲಂತೂ ಈ ಚಳವಳಿ ಒಂದು ಅನಿರೀಕ್ಷಿತ ಬದಲಾವಣೆಯನ್ನೇ ಮಾಡಿ ಅವರಲ್ಲಿ ದೇಶಭಕ್ತಿಯ ಪ್ರಥಮ ಜ್ವಾಲೆಯನ್ನು ಹೊತ್ತಿಸಿ ನಿರಂಕುಶಾಧಿಕಾರದ ವಿರುದ್ಧ ಪ್ರತಿಭಟನೆಯ ಭಾವವನ್ನು ಮೂಡಿಸಿತು. ಹಿಂದಿನ ಹೈದರಾಬಾದ್ ಸಂಸ್ಥಾನದಿಂದ ಬಂದಿರುವ ಹಲವಾರು ನಾಯಕರು ವಂದೇ ಮಾತರಂ ಚಳವಳಿಯಿಂದಲೇ ದೀಕ್ಷೆ ಪಡೆದವರು.

ವಂದೇ ಮಾತರಂ ಮುಷ್ಕರವು ೨೬ ನವೆಂಬರರಿಂದ ೧೦ ಡಿಸೆಂಬರ್, ೧೯೩೮ರವರೆಗೆ ಅವ್ಯಾಹತವಾಗಿ ಮುಂದುವರಿಯಿತು. ಈ ಚಳುವಳಿಗೆ ಯಾರ ಪ್ರಚೋದನೆಯೂ ಇರಲಿಲ್ಲ. ಇವರ ಹಿಂದೆ ಯಾವ ಜನನಾಯಕರೂ ಇರಲಿಲ್ಲ. ಇದು ಸ್ವಯಂಸ್ಫೂರ್ತಿಯಿಂದ ಹುಟ್ಟಿಕೊಂಡು ರಾಜ್ಯದ ಉದ್ದಗಲಕ್ಕೂ ವ್ಯಾಪಿಸಿತ್ತು. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದಲೂ ವಿದ್ಯಾರ್ಥಿಗಳು ಬಂದು ಈ ಚಳವಳಿಯಲ್ಲಿ ಸೇರುತ್ತಿದ್ದರು. ಡಿಸೆಂಬರ್ ೧೦ ರಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಒಂದು ಆದೇಶವನ್ನು ಜಾರಿಗೊಳಿಸಿದರು. 'ಚಳುವಳಿಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ತಕ್ಷಣ ಕ್ಷಮಾಪಣೆ ಕೇಳಿ ತಮ್ಮ ತಮ್ಮ ಕಾಲೇಜುಗಳಿಗೆ ಹಿಂತಿರುಗಿ ಹೋಗಬೇಕು. ತಪ್ಪಿದಲ್ಲಿ ಅವರ ಹೆಸರುಗಳನ್ನು ವಿಶ್ವವಿದ್ಯಾಲಯದ ದಾಖಲಾತಿಯಿಂದ ತೆಗೆದುಹಾಕುವುದು' ಎಂದು ಬೆದರಿಕೆ



ಹಾಕಲಾಯಿತು. ಅದರಲ್ಲಿ ಗುಲಬರ್ಗಾ ಶಾಲಾ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ೩೫೦ ಆಗಿತ್ತು. ವಿಶ್ವವಿದ್ಯಾಲಯದಿಂದ ಹೊರಹಾಕಲ್ಪಟ್ಟವರಲ್ಲಿ ಭಾರತದ ಮಾಜಿ ಪ್ರಧಾನಿ ದಿ. ಪಿ. ವಿ. ನರಸಿಂಹರಾವ್ ಮತ್ತು ಗುಲಬರ್ಗಾದ ಶ್ರೀ ಶರಣಗೌಡ ಇನಾಮದಾರರೂ ಇದ್ದರು. ವಿದ್ಯಾರ್ಥಿಗಳ ಈ ಚಳುವಳಿಯಲ್ಲಿ ಆರ್ಯಸಮಾಜದ ಕಾರ್ಯಕರ್ತರೂ ಸೇರಿಕೊಂಡು ಇದು ಇನ್ನೊಂದಿಷ್ಟು ಪ್ರಜ್ವಲಿಸುವಂತೆ ಮಾಡಿದರು.

ಆರ್ಯಸಮಾಜದ ಸತ್ಯಾಗ್ರಹಿಗಳು 'ವಂದೇ ಮಾತರಂ' ಎಂಬುದನ್ನು ತಾರಕ ಮಂತ್ರವನ್ನಾಗಿ ಮಾಡಿಕೊಂಡು ಚಳುವಳಿಗೆ ಇಳಿದರು. ಇಂಥ ಸತ್ಯಾಗ್ರಹಿಗಳನ್ನು ಬಂಧಿಸಿ ಜೈಲಿಗೆ ತಳ್ಳಿ ಅವರನ್ನು ಅಮಾನುಷವಾಗಿ ಹಿಂಸೆ ನೀಡಲಾಯಿತು. ಒಬ್ಬ ಸತ್ಯಾಗ್ರಹಿಯನ್ನು ಅಕ್ಷರಶಃ ದನಕ್ಕೆ ಬಡಿದಂತೆ ಬಡಿಯುತ್ತಿರಬೇಕಾದರೆ ಆತ ಪ್ರತಿಯೊಂದು ಹೊಡೆತಕ್ಕೂ 'ವಂದೇ ಮಾತರಂ' ಎಂದು ಘೋಷಣೆ ಕೂಗುತ್ತಿದ್ದನು. ಆತ ಘೋಷಣೆ ಕೂಗಿದಂತೆಲ್ಲ ಅತ್ಯಾಚಾರಿಗಳ ರೋಷ ತಾರಕ್ಕೇರುತ್ತಿತ್ತು. ಇನ್ನೊಂದಿಷ್ಟು ಜೋರಾಗಿ ಬೆತ್ತದಿಂದ, ಬಾರಕೋಲಿನಿಂದ ಹೊಡೆಯುತ್ತಿದ್ದರು. ಆದರೂ ಆ ಧೀರ 'ವಂದೇ ಮಾತರಂ' ಘೋಷಣೆಯನ್ನು ನಿಲ್ಲಿಸುತ್ತಿರಲಿಲ್ಲ. ಮೈತುಂಬ ಬಾಸುಂಡೆಗಳು ಎದ್ದವು. ಬಾಸುಂಡೆಗಳು ಒಡೆದು ರಕ್ತ ಸುರಿಯಲು ಪ್ರಾರಂಭಿಸಿತ್ತು. ರಾಕ್ಷಸರೂ ಹೊಡೆಯುವುದನ್ನು ನಿಲ್ಲಿಸಲಿಲ್ಲ. ರಾಮಚಂದ್ರ ಎಂಬ ಹೆಸರಿದ್ದ ಆ ಸತ್ಯಾಗ್ರಹಿಗೆ ಮುಂದೆ' ವಂದೇ ಮಾತರಂ ರಾಮಚಂದ್ರರಾವ್' ಎಂಬ ಹೆಸರು ಶಾಶ್ವತವಾಗಿ ಉಳಿದು ಬಂದಿತ್ತು.

ಹೈದರಾಬಾದ್ ಸಂಸ್ಥಾನದ ವಿರುದ್ಧ ನಡೆದ ಹೋರಾಟದಲ್ಲಿ ಬಹುಮುಖ್ಯವಾಗಿ 'ವಂದೇ ಮಾತರಂ ಚಳುವಳಿ' ಪ್ರಮುಖ ಸ್ಥಾನವನ್ನು ವಹಿಸಿದ್ದು ಒಂದು ದಾಖಲೆಯಾಗಿದೆ. ಈ ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡವರು ಕಲಬುರ್ಗಿ ಜಿಲ್ಲೆಯ ಹೋರಾಟಗಾರರಾಗಿದ್ದು, ಆ ಕಾಲದ ವಿದ್ಯಾರ್ಥಿಗಳು ವಹಿಸಿದ್ದು ಹೆಮ್ಮೆಯ ವಿಷಯ ಹಾಗೂ ಅಭಿಮಾನದ ಸಂಗತಿಯಾಗಿದೆ.

ಕ್ರಿ. ಶ. ೧೯೩೭ರಲ್ಲಿ ನಿಜಾಮನ ಸರಕಾರವು ಶಿಕ್ಷಣ ಸಂಸ್ಥೆ, ವಸತಿಗೃಹ, ಸಾರ್ವಜನಿಕ ಸ್ಥಳಗಳಲ್ಲಿ 'ವಂದೇ ಮಾತರಂ' ಹಾಡುವುದನ್ನು ನಿಷೇಧಿಸಿತು. ಇಂತಹ ಸಂದರ್ಭದಲ್ಲಿ ನಿಜಾಮ್ ಸರಕಾರದ ವಿರುದ್ಧ ವಿದ್ಯಾರ್ಥಿಶಕ್ತಿ, ಯುವಶಕ್ತಿ

ಸಿಡಿದು ನಿಂತಿತು. ಇವರ ಫಲವಾಗಿ ಉಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮುಷ್ಕರ ಆರಂಭವಾದವು. ಈ ಚಳವಳಿಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ನೇತೃತ್ವವನ್ನು ಕಲಬುರ್ಗಿ ಜಿಲ್ಲೆಯ ಜಗನ್ನಾಥರಾವ ಚಂಡ್ರಿಕಿ, ನಾರಾಯಣ ಕಾನಿಹಾಳ, ವ್ಹಿ. ಪಿ. ದೇವುಳಗಾಂವಕರ, ಸರ್ದಾರ ಶರಣಗೌಡ, ಚನ್ನಬಸಪ್ಪ ಕುಳಗೇರಿ, ಮುಂತಾದ ಕಲಬುರ್ಗಿ ಜಿಲ್ಲೆಯ ಯುವಕರು, ವಿಶ್ವವಿದ್ಯಾಲಯದ ವಿರುದ್ಧ ಚಳವಳಿಗೆ ನಾಂದಿ ಹಾಡಿದರು. ಎರಡು ವರ್ಷಗಳ ಮುಷ್ಕರದ ನಂತರ ವಿದ್ಯಾರ್ಥಿಗಳ ಚಳವಳಿಗೆ ಮಣಿದು ನಿಜಾಮ ಸರಕಾರ, 'ವಂದೇ ಮಾತರಂ' ನಿಷೇಧವನ್ನು ಹಿಂದಕ್ಕೆ ಪಡೆಯಿತು. ಹೈದ್ರಾಬಾದ್ ಸಂಸ್ಥಾನದ ವಿರುದ್ಧದ ಹೋರಾಟದ ಹಾದಿಯಲ್ಲಿ ಇದು ಮೊದಲನೆಯ ಗೆಲುವು ಇದರಿಂದ ಚಳವಳಿಗಾರರಲ್ಲಿ ಆತ್ಮವಿಶ್ವಾಸ ಮೂಡಿತು.

**ವಂದೇ ಮಾತರಂ ಚಳುವಳಿಯಗಾರರು:**

ವಂದೇಮಾತರಂ ರಾಮಚಂದ್ರರಾವ್, ಧಾರವಾಡಕರ ಮಾಸ್ತರ್, ಗುಲಬರ್ಗಾದಲ್ಲಿ ಜಗನ್ನಾಥರಾವ್ ಚಂದರ್ಕಿ ಮತ್ತು ಡಾ. ಪದ್ಮನಾಭ ಪುರಾಣಿಕ, ಶರಣಗೌಡ ಇನಾಮದಾರರು, ಸರಾದಾರ್ ವೀರಣಗೌಡರು ಪಾಟೀಲ.

**ಹೈದರಾಬಾದ್ ರಾಜ್ಯ ಕಾಂಗ್ರೆಸ್ ಆಂದೋಲನ (ಕ್ರಿ. ಶ. ೧೯೩೮):**

ಹೈದರಾಬಾದ್ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕ್ರಿ. ಶ. ೧೯೩೮ರಲ್ಲಿ ಒಂದು ಮೈಲಿಗಲ್ಲೆಂದು ಪರಿಗಣಿಸಲ್ಪಟ್ಟಿದೆ. ಆರ್ಯಸಮಾಜದ ಚಟುವಟಿಕೆಗಳು ೧೯ನೇ ಶತಮಾನದ ಕೊನೆಯ ದಶಕದಲ್ಲಿ ಆರಂಭವಾಗಿದ್ದರೂ ಕ್ರಿ. ಶ. ೧೯೩೫ರಿಂದೀಚೆಗೆ ಸ್ವಾಮಿ ರಮಾನಂದ ತೀರ್ಥರು ನೀಡಿದ್ದ ಉತ್ತೇಜನದಿಂದ ದ್ವಿಗುಣಗೊಂಡವು. ಆರ್ಯ ಸಮಾಜವು ವಿವಿಧ ಜಾತಿಗಳಲ್ಲಿ ಸಾಮಾಜಿಕ ಐಕ್ಯತೆ ಮೂಡಿಸುವ ಒಂದು ಪ್ರಬಲ ರಾಷ್ಟ್ರೀಯ ಸಂಸ್ಥೆಯಾಗಿ ಬೆಳೆದು ಬಂದಿತ್ತು. ಹಾಗೆಯೇ ನಿಜಾಮ ಸರ್ಕಾರವು ಸೆಪ್ಟೆಂಬರ್ ಕ್ರಿ. ಶ. ೧೯೩೮ರಲ್ಲಿ ಹೈದರಾಬಾದಿನ ರಾಜ್ಯ ಕಾಂಗ್ರೆಸ್ ಮೇಲೆ ನಿರ್ಬಂಧ ಹೇರಿದ್ದ ಕಾರಣ ಆರ್ಯ ಸಮಾಜದ ಚಳುವಳಿಗೆ ಪುಷ್ಟಿ ಸಿಕ್ಕಿತೆಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಆರ್ಯಸಮಾಜದ ಬಾಪಟ್ ಅವರು ಕ್ರಿ. ಶ. ೧೯೩೮ರಲ್ಲಿ ಗುಲಬರ್ಗಾಕ್ಕೆ ಬಂದು ಹಿಂದೂ ಮಹಾಸಭಾದ ಸಭೆಗಳನ್ನು ಸಂಘಟಿಸಿದಾಗ ಅವರನ್ನು ಸೆರೆಹಿಡಿಯಲಾಗುತ್ತದೆ.



ಕಲ್ಬುರ್ಗಿಯಲ್ಲಿ ಕಾಂಗ್ರೆಸ್ ಆಂದೋಲನಕ್ಕೆ ನಾಂದಿ ಹಾಡಿದವರು ಜಗನ್ನಾಥ ಚಂಡ್ರಿಕಿಯವರು. ಹೈದ್ರಾಬಾದಿನಲ್ಲಿ ಸೇರಿದ ಮೊದಲನೇ ಕಾಂಗ್ರೆಸ್ ಅಧಿವೇಶನಕ್ಕಿಂತ ಮುಂಚಿತವಾಗಿ ಜೈಲುವಾಸ ಪ್ರಾರಂಭಿಸಿದ ವೀರ, ಆಂದೋಲನದ ವ್ಯಾಪಕವಾಗುತ್ತಿದ್ದಂತೆ ಕಲ್ಬುರ್ಗಿಯ ಧುರೀಣರಾದ ಅಶ್ವತ್ಥರಾಮರು, ಕಕ್ಕೇರಿ ಹಣಮಂತರಾಯರು ಮೊದಲಾದವರು ಸತ್ಯಾಗ್ರಹ ಮಾಡಿದರೂ ಆಗ ಅವರನ್ನು ದಸ್ತಗಿರಿ ಮಾಡದೆ, ಮೊದಮೊದಲು ಕಾಂಗ್ರೆಸ್ಸಿನ ಆಂದೋಲನ ಕಲ್ಬುರ್ಗಿಯ ಜಿಲ್ಲೆಯಲ್ಲಿ ನಡದೇ ಇಲ್ಲವೆಂದು ಸರ್ಕಾರ ನಟಿಸಿತು. ಆದರೆ ನಂತರ ಎಲ್ಲ ಹಿರಿಯ ನಾಯಕರ ದಸ್ತಗಿರಿ ಮಾಡಲಾಯಿತು.

ಹೈದರಾಬಾದ್ ಕಾಂಗ್ರೆಸಿನ ಮೇಲೆ ನಿಜಾಮ ಸರ್ಕಾರ ಹೇರಿದ್ದ ಪ್ರತಿಬಂಧದ ಹಿನ್ನಲೆಯಲ್ಲಿ ಆರ್ಯಸಮಾಜ ಹಾಗೂ ಹಿಂದೂ ಮಹಾಸಭೆಗಳ ಸಂಘಟನೆಗಳು ಹೋರಾಟದಲ್ಲಿ ಧುಮುಕುತ್ತವೆ. ಆಗ ಈ ಹೈದರಾಬಾದ್ ರಾಜ್ಯ ಕಾಂಗ್ರೆಸ್ ಪ್ರಥಮ ಕಾರ್ಯಕಾರಿ ಸದಸ್ಯರುಗಳೆಂದರೆ ಗೋವಿಂದರಾವ್ ನಾನಲ್(ಅಧ್ಯಕ್ಷರು), ರಾಮಕೃಷ್ಣದೂತ್ (ಕಾರ್ಯದರ್ಶಿ), ಕರ್ನಾಟಕದ ಜನಾರ್ದನರಾವ್ ದೇಸಾಯಿ, ರವಿ ನಾರಾಯಣರೆಡ್ಡಿ ಮತ್ತು ಶ್ರೀನಿವಾಸರಾವ್ ಬೋರಿಕರ್ (ಸದಸ್ಯರಾಗಿದ್ದರು). ಹಾಗೆಯೇ ಕರ್ನಾಟಕದ ಪ್ರಾಂತೀಯ ಸಮ್ಮೇಳನದ ಸಂಘಟನೆಗೆ ಕಾರಣರಾದರು. ಹೈದರಾಬಾದಿನಲ್ಲಿ ಬಾಪಟ್ ಎಂಬುವರು ವೀರಸಾವರ್ಕರ್ ಅವರ ಹಿಂದೂ ಮಹಾಸಭಾದ ಚಳುವಳಿಯನ್ನು ನಿರ್ದೇಶಿಸುತ್ತಿದ್ದರು. ಬಾಪಟ್ ಅವರು ೧೯೩೮ ರಲ್ಲಿ ಗುಲಬರ್ಗಾಕ್ಕೆ ಬಂದು ಹಿಂದೂ ಸಭೆಗಳನ್ನು ಸಂಘಟಿಸಿದಾಗ ಅವರನ್ನು ಸೆರೆ ಹಿಡಿಯಲು ನಿಜಾಮ ಸರಕಾರ ಯೋಜನೆ ರೂಪಿಸಿತು ಆದರೆ ಇದನ್ನು ಮುಂಚಿತವಾಗಿ ಅರಿತ ಕಲಬುರಗಿಯ ಯುವಕರು ಸೊಲ್ಲಾಪುರಕ್ಕೆ ಕರೆದೊಯ್ಯುಲಾಯಿತು. ಸ್ವಾಮಿ ರಮಾನಂದ ತೀರ್ಥರು ಹೈದರಾಬಾದಿನಲ್ಲಿ ನಿಜಾಮನ ಸರಕಾರವು ಹೇರಿದ ನಿರ್ಬಂಧದ ಬಗೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದೇ ಅಲ್ಲದೆ ರಾಜ್ಯದಲ್ಲೆಲ್ಲಾ ಸಂಚರಿಸಿ ಸತ್ಯಾಗ್ರಹವನ್ನು ಸಂಘಟಿಸಿದರು.

ಆರ್ಯ ಸಮಾಜದ ಹೋರಾಟವು ತೀವ್ರಗೊಂಡು ಕ್ರಿ. ಶ. ೧೯೪೧ರ ವೇಳೆಗೆ ಹೈದರಾಬಾದ್ ನಗರದ ಜನಗಳಲ್ಲಿ ದೇಶಾಭಿಮಾನವನ್ನು ಮೂಡಿಸಿತ್ತು. ಈ ವೇಳೆಗಾಗಲೇ 'ರೆಹನ್‌ಮಾಯೇ ದಖನ್' ಎಂಬ ತೀವ್ರಗಾಮಿ ಉರ್ದು ದೈನಂದಿನ ಪತ್ರಿಕೆಯ ಸಂಪಾದಕರಾಗಿದ್ದ ಮಹಮ್ಮದಿ ಸಿದ್ದಿಕಿ ಎಂಬುವನು

'ಇತ್ತೇಹಾದ್–ಉಲ್–ಮುಸ್ಲಿಮೀನ್' ಎಂಬ ಬಂಡಾಯಗಾರರ ಸಂಘವನ್ನು (ಕ್ರಿ. ಶ. ೧೯೪೦) ಸ್ಥಾಪಿಸಿದನು. ಏಪ್ರಿಲ್ ೨೨–೨೪ ೧೯೪೫ರಂದು ಗುಲಬರ್ಗಾದಲ್ಲಿ ಆರ್ಯಸಮಾಜದ ನಾಲ್ಕನೇ ಅಧಿವೇಶನವು ಸಮಾವೇಶಗೊಂಡಿತು.

ಪೊಲೀಸರ ಲಾಟಿ ಚಾರ್ಜ್‌ನಿಂದ ಉಂಟಾದ ಅತೃಪ್ತಿಯು ಗುಲಬರ್ಗಾ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಹರಡಿ ರಾಷ್ಟ್ರೀಯ ಐಕ್ಯತೆಯು ಚುರುಕುಗೊಂಡಿತೆಂದು ಹೇಳಲಾಗುತ್ತದೆ. ೧೯೪೬ರಲ್ಲಿ ಮಿರ್ಜಾ ಇಸ್ಮಾಯಿಲ್ ಪ್ರಧಾನಮಂತ್ರಿಯಾಗಿ ನೇಮಕಗೊಂಡಾಗ ರಾಜಕೀಯ ನಿರ್ಬಂಧಗಳು ಸಡಿಲಗೊಂಡವು, ಆರ್ಯಸಮಾಜದವರು ಹೈದರಾಬಾದ್‌ನಲ್ಲಿ 'ಆರ್ಯಭಾನ್' ಎಂಬ ವಾರಪತ್ರಿಕೆಯನ್ನು ಆರಂಭಿಸಲು ಮಿರ್ಜಾ ಅನುಮತಿ ನೀಡಿದರು. ಆರ್ಯಸಮಾಜವು ಸಂಸ್ಥಾನಿ ಹೋರಾಟಗಾರರಲ್ಲಿ ಪರಿಣಾಮಕಾರಿಯಾದ ಸಂಘಟನೆ ಮೂಡಿಸಿದುದು ಗಣನೀಯವಾಗಿದೆ.

## ಕ್ವಿಟ್ ಇಂಡಿಯಾ ಚಳುವಳಿಯ ಪ್ರಭಾವ:

ಕ್ರಿ. ಶ. ೧೯೪೨ ಆಗಸ್ಟ್ ೮ ರಂದು ಪ್ರಾರಂಭಗೊಂಡ ಕ್ವಿಟ್ ಇಂಡಿಯಾ ಚಳುವಳಿಯು ದೇಶದ ತುಂಬೆಲ್ಲಾ ಆರಂಭಗೊಂಡ ಪ್ರಯುಕ್ತ ಇದರ ಪ್ರತಿಧ್ವನಿಯು ಜಿಲ್ಲೆಯಾದ್ಯಂತ ಹಬ್ಬಿತು. ಈ ಚಳುವಳಿಯು ಯಶಸ್ವಿಯಾಗಲು ದೇಶಿಯ ಶಿಕ್ಷಣ ಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ. ರಾಷ್ಟ್ರದ ಹಿತರಕ್ಷಣೆ ಶಾಲೆಯಿಂದಲೇ ಆರಂಭಗೊಳ್ಳಬೇಕೆಂಬ ಉದ್ದೇಶದಿಂದ ಹಲವು ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಅದರಲ್ಲಿ ಕಲಬುರಗಿಯಲ್ಲಿ ನೆಲೆಸಿದ ಶಿಕ್ಷಣ ಪ್ರೇಮಿ ವಿಠಲರಾವ ದೇವಳಗಾಂವಕರ ಅವರ ನಿರಂತರ ಪ್ರಯತ್ನದ ಫಲವಾಗಿ ನೂತನ ವಿದ್ಯಾಲಯ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ದೇಶದಲ್ಲಿ ನಡೆದ ಪ್ರತಿಯೊಂದು ಚಳುವಳಿಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರು. ಇದರಿಂದ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಆಂದೋಲನಗಳು ನಿರಂತರವಾಗಿ ನಡೆದುಕೊಂಡು ಬಂದವು ಅದರೊಂದಿಗೆ ಸಾರ್ವಜನಿಕ ಗ್ರಂಥಾಲಯ ಚಳುವಳಿ ಆರಂಭವಾಯಿತು. ಇದರ ಅಡಿಯಲ್ಲಿ ಕಲಬುರಗಿಯ ಶರಣಬಸವೇಶ್ವರ ಸಂಸ್ಥೆಯು ೧೯೧೬ರಲ್ಲಿ ಶರಣಬಸವೇಶ್ವರ ವಾಚನಾಲಯ ನಗರದ (ಇಂದಿನ ಕಿರಾಣಾ ಬಜಾರನಲ್ಲಿ)ದಲ್ಲಿ ಆರಂಭಿಸಿತು. ಇದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಸಹಾಯಕವಾಯಿತು.



ಸ್ಥಳೀಯರು ಇದರ ಮೂಲಕ ದೇಶದ ನಾನಾ ಭಾಗಗಳಲ್ಲಿ ನಡೆದ ಚಳುವಳಿಯ ಮಾಹಿತಿ ಪಡೆಯಲು ಸಾಧ್ಯವಾಯಿತು. ಗಾಂಧೀಜಿಯವರ 'ಮಾಡು ಇಲ್ಲವೆ ಮಡಿ' ಎನ್ನುವ ಘೋಷಣೆಯು ಜಿಲ್ಲೆಯ ಜನರಲ್ಲಿ ದೇಶಪ್ರೇಮ ಹೆಚ್ಚಿಸಲು ಸಹಾಯಕವಾಯಿತು. ಇದಕ್ಕೆ ಪ್ರತಿಯಾಗಿ ಜಿಲ್ಲೆಯ ಮಹಾಗಾಂವ ಗ್ರಾಮದ ಮಹಾದೇವಪ್ಪ ಪಾಟೀಲರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ "ಮಾಡಿ ಮಡಿ" ಎನ್ನುವ ಘೋಷಣೆಯನ್ನು ನೀಡುವುದರ ಮೂಲಕ ಸ್ಥಳೀಯರಲ್ಲಿ ಧೈರ್ಯ ತುಂಬಿದರು.

ಬಾಲಗಂಗಾಧರ ತಿಲಕರು ಗಣೇಶ ಉತ್ಸವವನ್ನು ರಾಷ್ಟ್ರೀಯ ಆಂದೋಲನದ ವೇದಿಕೆ ಮಾಡಿಕೊಂಡು ಭಾಷಣಗಳ ಮೂಲಕ ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು. ಈ ಉತ್ಸವದಿಂದ ಪ್ರೇರಿತರಾದ ಕಲಬುರಗಿಯ ನಾಯಕರು ಎಸ್. ಜಿ. ಗೋರೆಯವರನ್ನು ಭಾಷಣ ಮಾಡಲು ಕಲಬುರಗಿಗೆ ಆಹ್ವಾನಿಸಿದರು. ಇವರ ಭಾಷಣದಿಂದ ಜನರಲ್ಲಿ ಜಾಗೃತಿ ಮೂಡಿತು. ಇದನ್ನು ಅರಿತ ನಿಜಾಮ ಸರಕಾರ ಇವರನ್ನು ಬಂಧಿಸಲು ಯೋಜನೆ ಹಾಕಿಕೊಂಡಿತು. ಆದರೆ ಸ್ಥಳಿಯ ನಾಯಕರಾದ ವೆಂಕಟೇಶ ಪಾಂಡುರಂಗ ಮತ್ತು ಅವರ ಸ್ನೇಹಿತರು ಗೋರೆಯವರನ್ನು ಸುರಕ್ಷಿತವಾಗಿ ಅವರ ಸ್ಥಳಕ್ಕೆ ಮುಟ್ಟಿಸಿದರು. ನಿಜಾಮ ಸರಕಾರ ಒಂದು ಆದೇಶವನ್ನು ಹೊರಡಿಸಿ ಕ್ವಿಟ್ ಇಂಡಿಯಾ ಚಳುವಳಿ ಮತ್ತು ಗಣೇಶ ಉತ್ಸವ ನಡೆಯದಂತೆ ಕ್ರಮ ಜರುಗಿಸಿದರು. ನಿಜಾಮ ಸರಕಾರ ಎಷ್ಟೇ ಪ್ರಯತ್ನಿಸಿದರೂ ಜನರು ಚಳುವಳಿಗಳಿಂದ ಹಿಂದೆ ಸರಿಯಲಿಲ್ಲ.

## ಸಂಘ–ಸಂಸ್ಥೆಗಳ ಪಾತ್ರ:

ಕಲಬುರಗಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಪ್ರಚಾರಗೊಳಿಸುವಲ್ಲಿ ಹಲವು ಸಂಘ–ಸಂಸ್ಥೆಗಳು ತಮ್ಮನ್ನು ತಾವು ತೊಡಗಿಸಿಕೊಂಡವು. ಅದರಲ್ಲಿ ೧೯೩೨ ಸರದಾರ ಶರಣಗೌಡರು ಮತ್ತು ಕಲ್ಯಾಣಪ್ಪ ಸಜ್ಜನಶೆಟ್ಟಿ ಅವರ ನೇತೃತ್ವದಲ್ಲಿ ಜಿಲ್ಲೆಯ ಹಲವು ಯುವಕರು ಸೇರಿಸಿಕೊಂಡು "ವೀರಶೈವ ತರುಣ ಸಂಘ" ಸ್ಥಾಪಿಸಿ ಅದರ ಮೂಲಕ ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು. ೧೯೩೫ರಲ್ಲಿ ಚಂದ್ರಶೇಖರ ಪಾಟೀಲರ ನೇತೃತ್ವದಲ್ಲಿ ಮಹಾಗಾಂವದಲ್ಲಿ ತರುಣ ಸಂಘವನ್ನು ಸ್ಥಾಪಿಸುವುದರ ಮೂಲಕ ರಾಷ್ಟ್ರೀಯತೆ

ಮತ್ತು ಸ್ವಾತಂತ್ರ್ಯದ ಅರಿವು ಮೂಡಿಸಲಾಯಿತು. ಕಲಬುರಗಿ ನಗರದಲ್ಲಿ ದೈಹಿಕ ಶಿಕ್ಷಕರಾದ ಭೀಮಶಾ ಅವರು ವ್ಯಾಯಾಮ ಶಾಲೆಯನ್ನು ತೆರೆದು ಹಲವು ತರುಣರಿಗೆ ಮಲ್ಲಯುದ್ಧದ ತರಬೇತಿಯನ್ನು ನೀಡಲಾಯಿತು. ಇದರ ಉದ್ದೇಶ ರಜಾಕಾರರ ವಿರುದ್ಧ ಹೋರಾಡಲು ಒಂದು ಪ್ರಬಲ ಶಕ್ತಿಯುತ ತಂಡವನ್ನು ಸಿದ್ಧಪಡಿಸುವುದಾಗಿತ್ತು. ಕರ್ನಾಟಕ ಸಾಹಿತ್ಯ ಪರಿಷತ್, ಬೀದರ್, ರಾಯಚೂರು, ಕಲಬುರಗಿ, ಸುರಪುರ ಹಾಗೂ ಇತರ ಕಡೆಗಳಲ್ಲಿ ಅಧಿವೇಶನಗಳನ್ನು ನಡೆಯಿಸುವುದರ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಒಂದು ಅರ್ಥ ಕಲ್ಪಿಸಿಕೊಡಲಾಯಿತು. ಕ್ರಿ. ಶ. ೧೯೩೪ ರಿಂದ ೧೯೪೪ರ ಅವಧಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಹೋರಾಟ ತೀವ್ರ ರೂಪದಲ್ಲಿ ನಡೆಯಿತು. ಆದರೆ ಇಲ್ಲಿಯ ಪ್ರತಿಯೊಂದು ಹೋರಾಟಗಳನ್ನು ಬ್ರಿಟಿಷರು ನಿಜಾಮನ ಮೂಲಕ ನಿಯಂತ್ರಿಸುತ್ತಿದ್ದರು. ಇದೆ ಕಾಲಕ್ಕೆ ಬಾಲಗಂಗಾಧರ ತಿಲಕರು "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ" ಎನ್ನುವ ಅವರ ಘೋಷಣೆಯು ೧೯೩೫ ರಿಂದ ೧೯೪೫ರ ಅವಧಿಯಲ್ಲಿ ಮಿಂಚಿನಂತೆ ಸಂಚರಿಸಿತು. ಇದರಿಂದ ಪ್ರೇರೇಪಿತರಾದ ಜಿಲ್ಲೆಯ ನಾಯಕರು ತಿಲಕರ ೪ ಬೋಧನೆಗಳಾದ – ಸ್ವದೇಶಿ ಆಂದೋಲನ, ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಹಾಗೂ ಸ್ವರಾಜ್ಯಗಳ ಪ್ರಚಾರದಲ್ಲಿ ತೊಡಗಿದರು.

ಕ್ರಿ. ಶ. ೧೯೪೪ ರಿಂದ ೧೯೪೭ರ ಮಧ್ಯದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ನೀಡುವ ನಿಟ್ಟಿನಲ್ಲಿ ಹಲವು ಚರ್ಚೆಗಳು ನಡೆದವು. ಭಾರತದ ವೈಸರಾಯ ಆಗಿ ಅಧಿಕಾರವಹಿಸಿಕೊಂಡ ಲಾರ್ಡ್ ಮೌಂಟ್ ಬ್ಯಾಟನ್ ಹಾಗೂ ಇಂಗ್ಲೆಂಡಿನಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಲೇಬರ್ ಪಕ್ಷದ ಆಟ್ಲೆಯವರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ರೂಪಿಸಿ ಕೊನೆಗೆ ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ನೀಡಿದರು. ಆದರೆ ಹೈದ್ರಾಬಾದ್ ಕರ್ನಾಟಕ ಎಂದು ಕರೆಯಿಸಿಕೊಂಡ ಭಾಗಗಳಲ್ಲಿ ಹಿಂದೂಗಳ ಮೇಲೆ ವ್ಯಾಪಕ ದೌರ್ಜನ್ಯ ನಡೆಯಿತು. ಖಾಸಿಂ ರಜ್ವಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಸಂಭ್ರಮ ಆಚರಣೆಯ ವಿರುದ್ಧ ಕಠೋರ ಕ್ರಮಗಳನ್ನು ಜರುಗಿಸಲಾಯಿತು. ಸ್ವಾತಂತ್ರ್ಯ ಎನ್ನುವುದು ಜಿಲ್ಲೆಯ ಜನರಿಗೆ ಮರೀಚಿಕೆಯಾಯಿತು. ನಿಜಾಮ ಸರಕಾರದ ಕಣ್ಣು ತಪ್ಪಿಸಿ ಜಿಲ್ಲೆಯ ಹಲವು ಭಾಗಗಳಲ್ಲಿ ಅದೇ ದಿನ ಧ್ವಜಾರೋಹಣ ಮಾಡಿರುವ ಘಟನೆಗಳು ನಡೆದವು.



ಇದಕ್ಕೆ ಸ್ಫೂರ್ತಿ ಎನ್ನುವಂತೆ ೧೯೪೭ ಆಗಸ್ಟ್ ೧೫ ರಂದು ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಹೈದ್ರಾಬಾದ್ ಸುಲ್ತಾನ ಬಜಾರದಲ್ಲಿ ಧ್ವಜಾರೋಹಣ ಸಿದ್ಧತೆಯಲ್ಲಿದ್ದಾಗ ಪೊಲೀಸರು ಅವರನ್ನು ಬಂಧಿಸಿದರು. ಅಲ್ಲಿ ಭಾಗವಹಿಸಿದ ಹಲವರನ್ನು ಬಂಧಿಸಲಾಯಿತು. ಈ ರೀತಿಯ ಧ್ವಜಾರೋಹಣ ಜಿಲ್ಲೆಯ ಹಲವು ಭಾಗಗಳಲ್ಲಿ ಪೊಲೀಸರ ಕಣ್ಣು ತಪ್ಪಿಸಿ ನಡೆಯಿಸಲಾಯಿತು. ಆಗ ಪ್ರತಿಯೊಬ್ಬರು ಪ್ರತಿಜ್ಞೆಯನ್ನು ಕೈಗೊಂಡರು. "ವಿಶ್ವದ ಯಾವುದೇ ಶಕ್ತಿ ನಮ್ಮನ್ನು ಭಾರತದ ಒಕ್ಕೂಟದಿಂದ ದೂರವಿಡಲು ಸಾಧ್ಯವಿಲ್ಲ. ನಾವು ನಮ್ಮ ನಿಷ್ಠೆಯನ್ನು ಭಾರತದ ರಾಷ್ಟ್ರಧ್ವಜಕ್ಕೆ ಸಲ್ಲಿಸುತ್ತೇವೆ. ಭಾರತದ ಶಾಸನಕ್ಕೆ ವಿಧೇಯರಾಗಿರುತ್ತೇವೆ" ಎಂದು ಪ್ರತಿಜ್ಞಾವಿಧಿ ಸಲ್ಲಿಸಿದರು. ಅಂದು ಕಲಬುರಗಿಗೆ ಬರುವ ರೈಲುಗಳಿಗೆ ಭಾರತದ ರಾಷ್ಟ್ರಧ್ವಜವನ್ನು ಕಟ್ಟಿ ಅಲಂಕರಿಸಿ, ಅದರ ಮೇಲೆ "ವಂದೇಮಾತರಂ" ಬರೆದು ಸಂತೋಷ ಆಚರಿಸಿದರು. ಆದರೆ ನಂತರ ಬಂದ ನಿಜಾಮ ಸರಕಾರದ ಪೊಲೀಸ್ ಅಧಿಕಾರಿಗಳು ಧ್ವಜಗಳನ್ನು ಹರಿದು ಹಾಕಿ ಗೀತೆಯನ್ನು ಅಳಿಸಿಹಾಕಿ ಅಲ್ಲಿದ್ದ ಹಲವರನ್ನು ಬಂಧಿಸುವ ಕಾರ್ಯ ನಿರಾತಂಕವಾಗಿ ನಡೆಸಿದರು.

## ಕ್ರಿ. ಶ. ೧೯೪೭ ಆಗಸ್ಟ್ ೧೫ ರಂದು ಕಲಬುರಗಿಯಲ್ಲಿ ನಡೆದ ಧ್ವಜಾರೋಹಣ ಸಮಾರಂಭ

ಕ್ರಿ. ಶ. ೧೯೪೭ ಆಗಸ್ಟ್ ೧೫ ರಂದು ಮಧ್ಯರಾತ್ರಿ ೨ ಗಂಟೆಗೆ ಅಫಜಲಪೂರದಲ್ಲಿ ಹರಿರಾವ ಮುರಾರಿಯವರ ನೇತೃತ್ವದಲ್ಲಿ ಧ್ವಜಾರೋಹಣ ಆಚರಿಸಲಾಯಿತು. ನಂತರ ಅವರೆಲ್ಲರೂ ಸಮೀಪದ ಗಾಣಗಾಪೂರ ರೈಲು ನಿಲ್ದಾಣಕ್ಕೆ ಬೆಂಕಿ ಹಚ್ಚಿ ಹೊರಟುಹೋದರು. ಅವರನ್ನು ಬೆನ್ನಟ್ಟಿದ ಪೊಲೀಸರು ಅವರ ವಿರುದ್ಧ ಕ್ರಮ ಜರುಗಿಸಿದರು.

ನಾರಾಯಣ ಭೀಮರಾವ ದೇಶಪಾಂಡೆಯವರ ನೇತೃತ್ವದಲ್ಲಿ ಎಂ.ಎಸ್.ಕೆ ಮಿಲ್‌ನ ಒಳಭಾಗದಲ್ಲಿ ಧ್ವಜಾರೋಹಣ ಆಚರಿಸಲಾಯಿತು. ಈ ಸುದ್ದಿ ತಿಳಿದ ಪೊಲೀಸರು ಅಲ್ಲಿಗೆ ಹೋಗಿ ದೇಶಪಾಂಡೆಯವರನ್ನು ಹಾಗೂ ಅವರ ಸಂಗಡಿಗರನ್ನು ಬಂಧಿಸಲಾಯಿತು. ಇದರ ನಾಯಕತ್ವವನ್ನು ವಹಿಸಿಕೊಂಡ ದೇಶಪಾಂಡೆಯವರನ್ನು ಒಂದು ವರ್ಷ ನಲವತ್ತು ದಿನಗಳವರೆಗೆ ಸೆರೆಮನೆಯ ಶಿಕ್ಷೆಯನ್ನು ನೀಡಲಾಯಿತು.

ಆಗಸ್ಟ್ ೧೫ ರಂದು ಬೆಳಿಗ್ಗೆ ೬ ಗಂಟೆಗೆ ಕಕ್ಕೇರಿ ಹನುಮಂತರಾಯರ ನೇತೃತ್ವದಲ್ಲಿ ಸುಮಾರು ೪೦–೫೦ ಜನ ಯುವಕರ ತಂಡ ನೂತನ ವಿದ್ಯಾಲಯದ ಆಟದ ಮೈದಾನದಲ್ಲಿ ಫುಟ್‌ಬಾಲ್ ಆಡುವ ನೆಪದಲ್ಲಿ ಧ್ವಜಹಾರಿಸುವ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಇದನ್ನು ತಿಳಿದುಕೊಂಡ ಪೋಲೀಸರು ಅವರನ್ನು ಬಂಧಿಸಲು ಹೋದರು. ಅವರು ಬರುವಷ್ಟರಲ್ಲಿ ಯುವಕರ ತಂಡ ನಗರದ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಹೊರಟು ಹೋದರು. ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಅಣ್ಣಾರಾವ ಪಾಟೀಲ ಮತ್ತು ಅವರ ಸ್ನೇಹಿತರಿಂದ ಧ್ವಜಾರೋಹಣ ಮಾಡಲಾಯಿತು. ಮಹಾಗಾಂವ ಗ್ರಾಮದಲ್ಲಿ ಯುವಕರು ತಲೆಮರೆಸಿಕೊಂಡಿರುವುದರಿಂದ ಸಂಗವ್ವ ರಟಗಲ್, ಬೇಳಕೇರಿ ಈರವ್ವ, ಕಮಲಮ್ಮರ ನೇತೃತ್ವದಲ್ಲಿ ಧ್ವಜಾರೋಹಣ ಮಾಡಲಾಯಿತು. ಯಾದಗಿರಿಯಲ್ಲಿ ಕೊಳ್ಳೂರು ಮಲ್ಲಪ್ಪನವರ ನೇತೃತ್ವದಲ್ಲಿ ಯುವಕರು ಆಟದ ಮೈದಾನದಲ್ಲಿ ಧ್ವಜಾರೋಹಣ ಮಾಡಿದರು. ಸುರಪುರದಲ್ಲಿ ತುಳಜಾರಾಮ ವಕೀಲರ ನಾಯಕತ್ವದಲ್ಲಿ ಸ್ಥಳಿಯರು ಧ್ವಜಾರೋಹಣ ನೆರವೇರಿಸಿದರು. ಇಲ್ಲಿಯ ಒಂದು ವಿಶೇಷತೆ ಎಂದರೆ ಬಸಪ್ಪ ದರ್ಜಿ ಎನ್ನುವ ವ್ಯಕ್ತಿಯು ಸುಮಾರು ೧೧೫ ಧ್ವಜಗಳನ್ನು ಸಿದ್ಧಪಡಿಸಿ ಅವುಗಳನ್ನೆಲ್ಲ ರಾತ್ರೋರಾತ್ರಿ ವಿತರಣೆ ಮಾಡಿದನು. ಆದರೆ ಈ ಧ್ವಜಗಳನ್ನು ಯಾವ ಯಾವ ಸ್ಥಳಗಳಲ್ಲಿ ಹಾರಿಸಲಾಯಿತು ಎನ್ನುವುದರ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಾಗಿರುವುದಿಲ್ಲ. ಒಟ್ಟಿನಲ್ಲಿ ಕಲಬುರಗಿ ಜಿಲ್ಲೆಯ ಹಲವು ಭಾಗಗಳಲ್ಲಿ ನಡೆದ ಧ್ವಜಾರೋಹಣದ ವಿರುದ್ಧ ನಿಜಾಮ ಸರಕಾರ ಒಟ್ಟು ೩೬೨೧ ಜನರನ್ನು ಬಂಧಿಸಿ ಅವರ ಮೇಲೆ ಪ್ರಕರಣ ದಾಖಲಿಸಲಾಯಿತು.

ನಿಜಾಮ ಸರಕಾರ ಕ್ರಿ. ಶ. ೧೯೪೭ ಆಗಸ್ಟ್ ೧೮ ರಂದು ಒಂದು ಫರಮಾನ್ (ಆಜ್ಞೆ) ಹೊರಡಿಸಿ ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಗಳ ಮೇಲೆ ನಿರ್ಬಂಧ ಹೇರಲಾಯಿತು. ಅಲ್ಲದೆ ಹೋರಾಟಗಾರರು ಯಾವುದೇ ಸಂಪರ್ಕ ಸಾಧನಗಳನ್ನು ಬಳಸದಂತೆ ಆಜ್ಞೆ ಜಾರಿಗೊಳಿಸಲಾಯಿತು. ಜಿಲ್ಲೆಯಲ್ಲಿ ತ್ರಿವರ್ಣಧ್ವಜ ಹಾರಿಸುವುದು ನಿಷೇಧಗೊಳಿಸಲಾಯಿತು. ಈ ರೀತಿಯ ದಮನಕಾರಿ ಶಾಸನಗಳು ಕಲಬುರಗಿ



ಜಿಲ್ಲೆಯಲ್ಲಿ ನಡೆಯಲಿರುವ ಸ್ವಾತಂತ್ರ್ಯದ ಆಚರಣೆಗಳನ್ನು ಸಂಪೂರ್ಣವಾಗಿ ಸದೆಬಡಿದಿರುವುದನ್ನು ನಾವು ಕಾಣುತ್ತೇವೆ. ಭಾರತ ದೇಶ ಕ್ರಿ. ಶ. ೧೯೪೭ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಪಡೆದರೆ ಹೈದ್ರಾಬಾದ್ ಕರ್ನಾಟಕ (ಬೀದರ್, ಕಲಬುರಗಿ, ರಾಯಚೂರ) ಜಿಲ್ಲೆಗಳು ಮಾತ್ರ ಸ್ವಾತಂತ್ರ್ಯ ಪಡೆಯುವಲ್ಲಿ ವಿಫಲಗೊಂಡವು. ಕ್ರಿ. ಶ. ೧೯೪೭ ಆಗಸ್ಟ್ ೧೫ ರಿಂದ ೧೯೪೮ ಸೆಪ್ಟೆಂಬರ್ ೧೭ರವರೆಗೆ ನಿರಂತರವಾಗಿ ನಿಜಾಮ ಸರಕಾರದ ದೌರ್ಜನ್ಯದ ವಿರುದ್ಧ ಹೋರಾಡಿ ಕೊನೆಗೆ ಹೈದ್ರಾಬಾದ್ ಸಂಸ್ಥಾನವನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಿಕೊಳ್ಳಲು ಸರ್ದಾರ ವಲ್ಲಭಾಯಿ ಪಟೇಲರ ನಿರಂತರ ಪ್ರಯತ್ನದ ಫಲವಾಗಿ ೧೦೮ ಗಂಟೆಗಳ ಕಾಲ ಪೋಲೀಸ್ ಕಾರ್ಯಾಚರಣೆಯ ಮೂಲಕ ಸ್ವತಂತ್ರ ಭಾರತದಲ್ಲಿ ಕಲಬುರಗಿ ಸೇರ್ಪಡೆಗೊಂಡಿತು.

ಭಾರತದ ಸುಮಾರು ೨೦,೦೦೦ ಸೈನ್ಯ ಸೋಲಾಪುರದ ಮಾರ್ಗವಾಗಿ ಹೈದ್ರಾಬಾದನ್ನು ಸೆಪ್ಟೆಂಬರ್ ೧೩, ೧೯೪೮ ರಂದು ಪ್ರವೇಶಿಸಿತು. ಇದನ್ನು ಕಂಡ ಹೈದ್ರಾಬಾದ್ ಸೈನ್ಯದಲ್ಲಿ ಗೊಂದಲ ಸೃಷ್ಟಿಯಾಯಿತು. ಸೇನಾ ಅಧಿಕಾರಿಗಳು ಭಯಭೀತರಾಗಿ ಓಡಿ ಹೋಗಲಾರಂಭಿಸಿದರು. ಕ್ರಿ. ಶ. ೧೯೪೮ ಸೆಪ್ಟೆಂಬರ್ ೧೭ ರಂದು ನಿಜಾಮನು ತನ್ನ ರೇಡಿಯೋ ಮೂಲಕ ತಾನು ಭಾರತ ಒಕ್ಕೂಟಕ್ಕೆ ಸೇರಿರುವುದಾಗಿ ಜನರಿಗೆ ತಿಳಿಸಿದ. ದಕ್ಷಿಣ ವಿಭಾಗದ ದಂಡನಾಯಕ ರಾಜೇಂದ್ರಸಿಂಹಜೀ, ಮೇಜರ್ ಜನರಲ್ ಜೆ. ಎನ್. ಚೌಧರಿಯವರ ಸಮಯೋಚಿತವಾದ ಕಾರ್ಯಯೋಜನೆ, ಸರ್ದಾರ್ ಪಟೇಲರ ದೃಢ ನಿರ್ಧಾರದಿಂದಾಗಿ ಹಾಗೂ ಕಲಬುರಗಿ ಜಿಲ್ಲೆಯ ಸಾವಿರಾರು ಜನರ ತ್ಯಾಗ ಬಲಿದಾನದ ಪ್ರಯುಕ್ತ ಕೊನೆಗೆ ಕಲಬುರಗಿ ಜಿಲ್ಲೆಯು ಸ್ವತಂತ್ರ ಭಾರತದಲ್ಲಿ ವಿಲೀನಗೊಂಡಿತು. ಇದರೊಂದಿಗೆ ಕರ್ನಾಟಕದ ಮೂರು ಜಿಲ್ಲೆಗಳು, ಮಹಾರಾಷ್ಟ್ರದ ಐದು ಜಿಲ್ಲೆಗಳು ತೆಲಂಗಾಣದ ಎಂಟು ಜಿಲ್ಲೆಗಳು ಸ್ವತಂತ್ರಗೊಂಡವು. ಭಾರತ ಸ್ವತಂತ್ರ ಸಂಗ್ರಾಮದಷ್ಟೇ ರೋಚಕವಾದ ಚರಿತ್ರೆಯನ್ನು ಸ್ಥಳಿಯ ಹೋರಾಟವು ಪಡೆದುಕೊಂಡಿದೆ. ಸೆಪ್ಟೆಂಬರ್ ೧೭ ರಂದು ಪ್ರತಿವರ್ಷ ಈ ಮೇಲಿನ ಜಿಲ್ಲೆಗಳಲ್ಲಿ ವಿಮೋಚನಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ.

## ಕಲಬುರಗಿ ಸ್ವಾತಂತ್ರ್ಯ ಹೋರಾಟಗಾರರು

೦೧ ಸ್ವಾಮಿ ರಮಾನಂದ ತೀರ್ಥರು
೦೨ ಸರ್ದಾರ್ ಶರಣಗೌಡ ಇನಾಮದಾರ್
೦೩ ದತ್ತಾತ್ರೇಯ ಅವರಾದಿ
೦೪ ಪ್ರೋ. ದೇವಳಗಾಂವಕರ
೦೫ ಕೊಳ್ಳುರು ಮಲ್ಲಪ್ಪ
೦೬ ನಾರಾಯಣರಾವ ಕನ್ಯಾಳ
೦೭ ಜಗನಾಥರಾವ ಚಂಡ್ರಿಕಿ
೦೮ ಹನುಮಂತರಾಯ ಕಕ್ಕೇರಿ
೦೯ ಅಣ್ಣಾರಾವ ಪಾಟೀಲ
೧೦ ಪದ್ಮನಾಭ ಪುರಾಣಿಕ
೧೧ ವೀರಣ್ಣಗೌಡ ಪಾಟೀಲ
೧೨ ಮಹಾದೇವ ದೇಸಾಯಿ
೧೩ ವಿಠಲರಾವ ದೇವಳಗಾಂವಕರ
೧೪ ವೆಂಕಟೇಶ ಪಾಂಡುರಂಗರಾವ
೧೫ ನಾರಾಯಣರಾವ ದೇಶಪಾಂಡೆ
೧೬ ಕಕ್ಕೇರಿ ಹಣಮಂತರಾಯ
೧೭ ಹರಿರಾವ ಮುರಾರಿ
೧೮ ಅಪ್ಪಾರಾವ ಪಾಟೀಲ ಮಹಾಗಾಂವ
೧೯ ಚಂದ್ರಶೇಖರ ಪಾಟೀಲ
೨೦ ಜಯಚಾರ್ಯ ಪುರಾಣಿಕ
೨೧ ಎಸ. ಟಿ. ಸಾಸನೂರ
೨೨ ಕಲ್ಮಣಕರ ದಿಗಂಬರರಾವ
೨೩ ಕಾಡಾದಿ ಮಲ್ಲಪ್ಪನವರು
೨೪ ಬಾಬಾಸಾಹೇಬ ದೇವಳಗಾಂವಕರ
೨೫ ಡಾ|| ಕಂಠಿ
೨೬ ಚನ್ನಮಲ್ಲಪ್ಪ ಕಲಬುರಗಿ
೨೭ ಸಿದ್ದಪ್ಪ ಕಲಬುರಗಿ
೨೮ ಅನಂತರಾವ ಹರಸೂರ
೨೯ ಭೀಮಶೆಟ್ಟಿ ಪಾಟೀಲ
೩೦ ಚಂದ್ರಮೋಹನ ಬೆಲ್ದಾಳ
೩೧ ಸೂರಜ ತಿವಾರಿ
೩೨ ಅಮರಸಿಂಗ ರಾಠೋಡ
೩೩ ಗಿರಿಧರರಾವ ಜವಳಕರ
೩೪ ವಿಠಲರಾವ ಪವಾರ
೩೫ ಅಣ್ಣಾರಾವ ಗಣಮುಖಿ
೩೬ ಭೀಮಶಾ ಮಾಸ್ತರ
೩೭ ಧರ್ಮವೀರ ಗಂಪಾ
೩೮ ಮೋಹನ್‌ಸಿಂಗ ಠಾಕೂರ
೩೯ ಹರಿರಾವ ಮುರಾರಿ
೪೦ ವಿದ್ಯಾಧರ ಗುರೂಜಿ
೪೧ ಚನ್ನಬಸಪ್ಪ ರುಟಗೇರಿ
೪೨ ಕಿಷನ್‌ರಾವ ದೇಶಪಾಂಡೆ
೪೩ ಕುಸುಮಾಕರ ದೇಸಾಯಿ
೪೪ ಚನ್ನಬಸಪ್ಪ ಕುಳಗೇರಿ
೪೫ ವಿಶ್ವನಾಥರೆಡ್ಡಿ ಮುದ್ನಾಳ
೪೬ ರಾಜಾವೆಂಕಟಪ್ಪ ನಾಯಕ
೪೭ ಹನುಮನಗೌಡ
೪೮ ನಾಗಣ್ಣ ವಕೀಲರು
೪೯ ಮಹಾದೇವಪ್ಪ ಹೆಮನೂರ್
೫೦ ತಮ್ಮಯ್ಯ ದರ್ಬಾರಿ
೫೧ ವೆಂಕೋಬರಾವ ಪದಕಿ
೫೨ ಲಕ್ಷ್ಮಣರಾವ ಜಮದರಖಾನಿ
೫೩ ಪರಮಣ್ಣ ಬಿಳವಾರ
೫೪ ಅನಂತಚಾರ್ಯ ಚಿಂಚೋಳಿ
೫೫ ದಾಸರಾವ ಮೊಕ್ತೆದಾರ್
೫೬ ರಾಮರಾವ ಹೆಜೀಬ್
೫೭ ವಾಸುದೇವ ದೀಕ್ಷಿತ
೫೮ ಗುರುಭೀಮರಾವ ಪಾಟೀಲ
೫೯ ಹರೇಖತರಾಯ
೬೦ ಹನುಮಂತರಾವ ಪಾಟೀಲ ಜಂಬಗಿ
೬೧ ಭೀಮಶ್ಯಾ ಮಲ್ಕಪ್ಪ
೬೨ ಮಾರಪ್ಪಾ ಅಗಸರ
೬೩ ಗುರುಪಾದಪ್ಪ ಮಲ್ಕಪ್ಪ
೬೪ ಮಹಾಂತಪ್ಪ ಕಿಣಗಿ
೬೫ ಗುರುಲಿಂಗಪ್ಪ ಹತ್ತಿ
೬೬ ನಾಗೇಂದ್ರಪ್ಪ ಬೆಣ್ಣೂರ
೬೭ ಕಾಳಪ್ಪಾ ಹರಸೂರ
೬೮ ಸಂಗವ್ವ ರಟಗಲ್
೬೯ ಉಪ್ಪಲದಿನ್ನಿಯ ಕಮಲವ್ವ
೭೦ ಈರವ್ವ ಮುಂತಾದವರು.

### ಪೂಜ್ಯ ದೊಡ್ಡಪ್ಪ ಅಪ್ಪಾ:

ಕಲಬುರಗಿಯ ಶರಣಬಸವೇಶ್ವರ ಸಂಸ್ಥಾನದ ಏಳನೆಯ ಪೀಠಾಧಿಪತಿಗಳಾಗಿರುವ ಪೂಜ್ಯ ದೊಡ್ಡಪ್ಪ ಅಪ್ಪ ಅವರು ಸಂಸ್ಥಾನದ ಕಾರ್ಯಕಲಾಪಗಳೊಂದಿಗೆ, ಶೈಕ್ಷಣಿಕ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಹಲವು ಯೋಜನೆಗಳನ್ನು ರೂಪಿಸಿದರು. ಹೈದ್ರಬಾದ್ ಪ್ರಾಂತಕ್ಕೆ ಸೇರಿದ ಕಲಬುರಗಿಯಲ್ಲಿ

ಕನ್ನಡ ಶಿಕ್ಷಣಕ್ಕೆ ಹಲವು ಅಡತಡೆಗಳಿದ್ದವು, ಅವುಗಳ ನಿವಾರಣೆಗೆ ಮುಂದಾದ ದೊಡ್ಡಪ್ಪ ಅಪ್ಪ ಅವರು ಕನ್ನಡ ಉಳಿಸಿ, ಬೆಳಸಿ, ಆಂದೋಲನಕ್ಕೆ ಚಾಲನೆ ನೀಡಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಆಂದೋಲನಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಂಸ್ಥಾನದ ಅಡಿಯಲ್ಲಿ ಕ್ರಿ. ಶ. ೧೯೧೮ರಲ್ಲಿ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಿ, ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು. ಅವರ ಅವಧಿಯಲ್ಲಿ ಮಹಿಳೆಯರನ್ನು ಸುಶಿಕ್ಷತರನ್ನಾಗಿಸುವ ನಿಟ್ಟಿನಲ್ಲಿ ಬಾಲಕಿಯರಿಗೆ ಪ್ರತ್ಯೇಕವಾಗಿ ಕನ್ನಡ ಮಾಧ್ಯಮಿಕ ಶಾಲೆಯನ್ನು ಕ್ರಿ. ಶ. ೧೯೩೪ರಲ್ಲಿ ತೆರೆದರು.

ಪೂಜ್ಯ ದೊಡ್ಡಪ್ಪ ಅಪ್ಪ ಅವರು ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ನಿಜಾಮ್ ಸರಕಾರದ ವಿರುದ್ಧ ಮಹತ್ವದ ಪಾತ್ರ ವಹಿಸಿದರು. ಕ್ರಿ. ಶ. ೧೯೪೭ರ ಕ್ಕಿಂತ ಮುಂಚೆ ಸ್ವಾತಂತ್ರ್ಯ ಹೋರಾಟವನ್ನು ಈ ಭಾಗದಲ್ಲಿ ಜೀವಂತವಾಗಿರಿಸಿದವರು ದೊಡ್ಡಪ್ಪ ಅಪ್ಪ ಅವರು. ಇವರು ಸ್ಥಾಪಿಸಿದ ಸಾರ್ವಜನಿಕ ಗ್ರಂಥಾಲಯವು ಕಲಬುರಗಿಯ ಜನರಲ್ಲಿ ಕನ್ನಡ ಭಾಷೆಯ ಪ್ರೀತಿ, ಹಾಗೂ ರಾಷ್ಟ್ರೀಯ ಭಾವನೆಯನ್ನು ಹೆಚ್ಚಿಸಿತು. ಗ್ರಂಥಾಲಯ ಹಾಗೂ ಸಂಸ್ಥಾನದ ಅಡಿಯಲ್ಲಿ ರಾಷ್ಟ್ರೀಯ ಆಂದೋಲನದ ಹಾಗೂ ಕನ್ನಡ ಭಾಷೆಯ ಕುರಿತು ಹಲವು ಉಪನ್ಯಾಸಗಳನ್ನು ಆಯೋಜಿಸಿದರು. ವಿಶೇಷವಾಗಿ ಜಯದೇವಿ ತಾಯಿ ಲಿಗಾಡೆ, ದ. ರಾ. ಬೇಂದ್ರೆ, ಬಿ. ಶಿವರುದ್ರ ಸ್ವಾಮಿ ಮುಂತಾದವರು ಸಂಸ್ಥಾನಕ್ಕೆ ಭೇಟಿಕೊಟ್ಟು ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಇವರು ನಡೆಸಿದ ಚಟುವಟಿಕೆಗಳು ನಿಜಾಮ ವಿರೋಧಿ ಎಂದು ಪರಿಗಣಿಸಿದ ಕೆಲವು ಸ್ಥಳಿಯರು ಶ್ರೀ ಶರಣಬಸವೇಶ್ವರ ದೇಗುಲದ ಮೇಲೆ ಧಾಳಿ ಮಾಡಿದರು. ಕ್ರಿ. ಶ. ೧೯೨೪ರಲ್ಲಿ ಕೆಲಕಾಲ ದಾಸೋಹ ಮಹಾಮನೆಯ ಮೇಲೆ ಮುತ್ತಿಗೆ ಹಾಕಿದರು, ದೇವಸ್ಥಾನದ ಸುತ್ತಮುತ್ತಲಿನ ಮನೆಗಳ ಮೇಲೆ ಹಾಗೂ ದೇವಸ್ಥಾನದ ಕೆಲಭಾಗಗಳ ಮೇಲೆ ದಾಳಿ ನಡೆಸಿದರು.

ಕಲಬುರಗಿ ನಗರದ ಶರಣಬಸವೇಶ್ವರ ದೇವಾಲಯದ ಮೇಲೆ ಹಾಗೂ ಅದರ ಸುತ್ತಮುತ್ತಲಿನ ಜನರ ಮೇಲೆ ನಡೆದಿರುವ ದಾಳಿಯು ಮಹಾತ್ಮಾ ಗಾಂಧೀಜಿಯವರಿಗೆ ತಲುಪಿತು, ಅದೇ ಕಾಲದಲ್ಲಿ ನಡೆದ ೩೯ನೇ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಬೆಳಗಾವಿಗೆ



ಆಗಮಿಸಿದರು, ಅದರಲ್ಲಿ ಗಾಂಧಿಯವರು ಕಲಬುರಗಿಯಲ್ಲಿ ನಡೆದ ಘಟನೆಯನ್ನು ಖಂಡಿಸಿ ನಿರ್ಣಯ ಕೈಗೊಂಡರು. ಅಲ್ಲದೆ ತಮ್ಮ ನಿಕಟವರ್ತಿಗಳಾದ ಅಲಿ ಸಹೋದರನ್ನು ಕಲಬುರಗಿಗೆ ಕಳುಹಿಸಿ ಅಲ್ಲಿಯ ಘಟನೆಯ ನೈಜ ವರದಿಯನ್ನು ಪಡೆದುಕೊಂಡರು.

ಅಲಿ ಸಹೋದರು ನೀಡಿದ ವರದಿಯನ್ನು ಆಧರಿಸಿ ಮಹಾತ್ಮಾ ಗಾಂಧಿಯವರು ಕ್ರಿ. ಶ. ೧೯೨೭ ಫೆಬ್ರವರಿಯಲ್ಲಿ ಕಲಬುರಗಿಗೆ ಭೇಟಿ ನೀಡಿದರು. ಮಹಾದಾಸೋಹಿ ಶರಣಬಸವೇಶ್ವರರ ಸಮಾಧಿಯ ಸ್ಥಳದಲ್ಲಿ ಶ್ರದ್ಧಾಂಜಲಿ ಸಲ್ಲಿಸಿ, ನಂತರ ದೊಡ್ಡಪ್ಪ ಅಪ್ಪ ಅವರನ್ನು ಭೇಟಿಯಾಗಿ, ಘಟನೆಯ ಕುರಿತು ಮಾಹಿತಿ ಪಡೆದುಕೊಂಡರು. ಅದನಂತರ ದಾಸೋಹ ಮಹಾಮನೆಯಲ್ಲಿ ಸ್ಥಳೀಯರನ್ನು ಉದ್ದೇಶಿಸಿ ಮಾತನಾಡಿದರು. ಈ ವಿಷಯ ಹೈದ್ರಾಬಾದ್‌ನ ನಿಜಾಮನಿಗೂ ತಲುಪಿತು. ಈ ಘಟನೆಯ ಕುರಿತು ವಿಷಾದ ವ್ಯಕ್ಯಪಡಿಸಿದನು. ಕ್ರಿ. ಶ. ೧೯೪೮ರಲ್ಲಿ ಸ್ವಾತಂತ್ರ್ಯ ಆಂದೋಲನ ಹೈದ್ರಾಬಾದ್ ಕರ್ನಾಟಕ ರಾಜ್ಯದಲ್ಲಿ ಉತ್ತುಂಗದಲ್ಲಿದ್ದಾಗ ನಿಜಾಮನ ಖಾಸಗಿ ಸೈನ್ಯವಾದ ರಜಾಕರರಿಂದ ಮತ್ತೊಮ್ಮೆ ದೇವಸ್ಥಾನದ ಮೇಲೆ ದಾಳಿ ನಡೆಯಿತು. ಈ ದಾಳಿಯಲ್ಲಿ ಹಲವರು ಹತರಾದರು. ದೊಡ್ಡಪ್ಪ ಅಪ್ಪ ಅವರ ಜೀವಕ್ಕೆ ಅಪಾಯ ಕಂಡುಬಂದಾಗ ಅವರು ಕೆಲಕಾಲ ಸೊಲ್ಲಾಪುರಕ್ಕೆ ಹೋದರು. ನಂತರದ ಸಮಯದಲ್ಲಿಯು ದೊಡ್ಡಪ್ಪ ಅಪ್ಪ ಅವರು ಸ್ವಾತಂತ್ರ್ಯ ಆಂದೋಲನಕ್ಕೆ ಹಾಗೂ ಕನ್ನಡ ಭಾಷೆಯ ಪ್ರಚಾರಕ್ಕೆ ನಿರಂತರವಾಗಿ ಶ್ರಮಿಸಿದ ಒಬ್ಬ ಮಹಾನ್ ದೇಶಪ್ರೇಮಿ ಹಾಗೂ ಭಾಷೆ ಪ್ರೇಮಿಯಾಗಿದ್ದಾರೆ.

**ಕಲಬುರಗಿಯಲ್ಲಿ ಗಾಂಧೀಜಿಯವರು ಮಾಡಿದ ಭಾಷಣದ ವಿವರ:**

ಗಾಂಧೀಜಿಯವರು ಪ್ರಸಿದ್ಧ ಶ್ರೀ ಶರಣಬಸವೇಶ್ವರರ ದೇಗುಲ ಮುಂದೆ ಆಯೋಜಿಸಲಾಗಿದ್ದ ಸರಿಸುಮಾರು ೧೦,೦೦೦ ಜನರ ಬೃಹತ್ ಸಭೆಯನ್ನು ಉದ್ದೇಶಿಸಿ, (ಫೆಬ್ರವರಿ ೨೨, ೧೯೨೭ ರಂದು) ಫೆಬ್ರವರಿ ೨೬, ೧೯೨೭ರಂದು 'ದ ಹಿಂದು' ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟಿಸಲಾದ ವರದಿಯಲ್ಲಿ ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ' ಪ್ರಕಾರ "ಒಂದು ಪ್ರಮುಖ ಮತ್ತು ಪ್ರಭಾವಕಾರಿ ಭಾಷಣವನ್ನು ಮಾಡಿದರು".

**ವರದಿಯು ಹೀಗೆ ನುಡಿಯಿತು:**

"ಗಾಂಧೀಜಿಯವರು ಸಭೆಗೆ ಆಗಮಿಸುವ ಮುನ್ನ ಅವರನ್ನು ದೇವಾಲಯಕ್ಕೆ ಕರೆದೊಯ್ಯಲಾಯಿತು ಮತ್ತು ಪ್ರತಿಮೆಗಳಿಗೆ ಆದ ಹಾನಿಯನ್ನು ವಿವರಿಸಲಾಯಿತು. ಅವರಿಗೆ ಧಾರ್ಮಿಕ ಪ್ರಾಮುಖ್ಯತೆಯನ್ನು ಹೊಂದಿದ್ದ ಸುಂದರ ಕಲಾಕೃತಿಯಾದ ಬೃಹತ್ ನಂದೀಶ್ವರನನ್ನು ತೋರಿಸಲಾಯಿತು. ನಂದೀಶ್ವರನಿಗೆ ಹಾನಿಯಾಗಿದೆ ಮತ್ತು ಅದನ್ನು ದುರಸ್ತಿ ಮಾಡಲು ಸಾಧ್ಯವಿಲ್ಲದಷ್ಟು ಮಟ್ಟಿಗೆ ವಿರೂಪಗೊಳಿಸಲಾಗಿದ್ದನ್ನು ನೋಡಿದರು".

"ತಾನು ದೊಡ್ಡ ಮುಸಲ್ಮಾನ ರಾಜ್ಯದಲ್ಲಿ ಮಾತನಾಡುತ್ತಿದ್ದೇನೆ ಎಂದು ಅವರಿಗೆ ತಿಳಿದಿತ್ತು. ತನ್ನ ಮುಂದೆ ಅವರು ಅನೇಕ ಮುಸಲ್ಮಾನ್ ಗೆಳೆಯರನ್ನು ನೋಡಿದರು. ಆದರೆ ದೇವಾಲಯವನ್ನು ನೋಡಿದಾಗ ಅವರಿಗೆ ಎಷ್ಟು ಆಳವಾಗಿ ನೋವಾಯಿತು ಎನ್ನುವುದನ್ನು ಹೇಳದಿದ್ದರೆ ತಾನು ಕರ್ತವ್ಯದಲ್ಲಿ ವಿಫಲನಾಗುತ್ತೇನೆ ಎನ್ನಿಸಿತು, ಅಪವಿತ್ರಗೊಳಿಸಿದ್ದಾರೆ ಎಂಬುದನ್ನು ಮತ್ತೊಮ್ಮೆ ನೆನಪು ಮಾಡಿಕೊಳ್ಳಲಾಯಿತು. ಗುಲ್ಬರ್ಗಾದಲ್ಲಿ ಇಂತಹ ಕೃತ್ಯ ಸಂಭವಿಸಬಾರದಾಗಿತ್ತು ಮತ್ತೆ ಈ ಕೃತ್ಯ ಯಾರಿಗೂ ಹೆಮ್ಮೆಯಾಗುವ ವಿಷಯವಾಗಿರಲಿಲ್ಲ.

ಅವರು ಪವಿತ್ರ ಖುರಾನ್‌ನನ್ನು ಒಂದಕ್ಕಿಂತ ಹೆಚ್ಚು ಬಾರಿ ಓದಿದ್ದರು ಹಾಗೂ ದಿವಂಗತ ಮೌಲಾನಾ ಶಿಬ್ಲಿ ಬರೆದ ಪ್ರವಾದಿಯ ಜೀವನದ ಬಗ್ಗೆ ಸಹ ಓದಿದ್ದರು, ಆದರೆ ಇದರಲ್ಲಿ ಇಂತಹ ಅಪವಿತ್ರಗೊಳಿಸುವಿಕೆಗಳ ಕೆಲಸಗಳ ಬಗ್ಗೆ ವಿವರಿಸಿಲ್ಲ.

"ಗಾಂಧೀಜಿಯವರು ನಂತರ ಹಿಂದುಗಳತ್ತ ತಿರುಗಿದರು ಮತ್ತು ಅವರಿಗೆ ಹೇಳಿದರು ಅಸ್ಪೃಶ್ಯತೆಯನ್ನು ಅಳಿಸದ ಹೊರತು ಹಿಂದುಧರ್ಮವು ಕಪ್ಪು ಚುಕ್ಕೆಯನ್ನು ಪಡೆಯುತ್ತದೆ. ಪ್ರತಿಯೊಬ್ಬ ಹಿಂದುವಿಗೆ ಸ್ವಾಮಿ ಶ್ರದ್ಧಾನಂದಜೀ ಅವರ ಜೀವನದ ಪಾಠ ಇದಾಗಿದೆ ಎಂದು ನುಡಿದರು".

**ಉಭಯ ಕೋಮುಗಳಿಗೆ ಮನವಿ:**

ಗಾಂಧೀಜಿಯವರು ಪ್ರಕಟಿಸುತ್ತಿದ್ದ 'ಯಂಗ್ ಇಂಡಿಯಾ'ದಲ್ಲಿ ಹಿಂದೂ–ಮುಸ್ಲಿಂ ಪರಿಸ್ಥಿತಿಯ ಬಗ್ಗೆ ನೀಡಲಾದ ಶೀರ್ಷಿಕೆಯು 'ಗುಲ್ಬರ್ಗಾಕ್ಕೆ ಹುಚ್ಚು ಹಿಡಿದಿದೆ' ಎಂದು ಇತ್ತು. ದಿನಾಂಕ ಸೆಪ್ಟೆಂಬರ್ ೪, ೧೯೨೪ ರಂದು ದ



ಹಿಂದು ಆಂಗ್ಲ ದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಪ್ರಕಾರ ಅದು ಹೊರಬಂದಿತು.

ವರದಿಯು ಹೇಳಿದ್ದೇನೆಂದರೆ ಲೇಖನವು ಗುಲ್ಬರ್ಗಾದಲ್ಲಿ ಇತ್ತೀಚೆಗೆ ನಡೆದ ದುರಾದೃಷ್ಟಕರ ಘಟನೆಗಳನ್ನು ಉಲ್ಲೇಖಿಸಿ, ಕೊನೆಯಲ್ಲಿ ಉಭಯ ಕೋಮುಗಳನ್ನು ಸಜೀವ ಒಗ್ಗಟ್ಟಿನ ಬಗ್ಗೆ ಪಾಠ ಕಲಿಯಬೇಕು. ಪ್ರತೀಕಾರದ ಪಥದಲ್ಲಿ ಸಾಗುವುದನ್ನು ತಡೆಗಟ್ಟಬೇಕು ಎಂದು ಮಹಾತ್ಮಗಾಂಧೀಜಿಯವರು ಮನವಿ ಮಾಡಿದರು.

ಗಾಂಧೀಜಿಯವರ ಅದೇ ಲೇಖನದಲ್ಲಿ "ಹಿಂದುಗಳ ಪ್ರಚೋದನೆ ಏನೇ ಆಗಿದ್ದರೂ, ಮುಸಲ್ಮಾನ ವಿಸ್ಫೋಟವು ಅಪಾಯಕರವಾಗಿ ತೋರುತ್ತಿದೆ, ದೇವಾಲಯಗಳನ್ನು ಅಪವಿತ್ರಗೊಳಿಸುವುದು ಯಾವುದೇ ಸನ್ನಿವೇಶದಲ್ಲಿ ಸಮರ್ಥನೀಯವಲ್ಲ ಎಂದು ಪ್ರತಿಪಾದಿಸಿದರು.

ಮತ್ತೆ "ನಿಜವಾದ ಹಿಂದು–ಮುಸ್ಲಿಂ ಒಗ್ಗಟ್ಟಿಗಾಗಿ ಮುಸಲ್ಮಾನರು ಸಹಿಷ್ಣುಗಳಾಗಿ ಇರಬೇಕು", ಅಗತ್ಯದ ಗುಣಲಕ್ಷಣವಾಗಿ ಅಲ್ಲ, ತತ್ವವಾಗಿ ಅಲ್ಲ, ಆದರೆ ತಮ್ಮ ಧರ್ಮದ ಭಾಗವಾಗಿ ಇರಬೇಕು. ಅವರ ಧರ್ಮವು ನೈಜವಾದುದೆಂದು ಇತರರ ಧರ್ಮವನ್ನು ನೋಡಿದಾಗ ಹಾಗೆ ಪರಿಗಣಿಸಬೇಕಾಗುತ್ತದೆ.

ಹಿಂದುಗಳು ಅದೇ ಸಹಿಷ್ಣುತೆಯನ್ನು ನಂಬಿಕೆಯ ವಿಷಯವಾಗಿ ನಂಬಿಕೆ ಮತ್ತು ಧಾರ್ಮಿಕತೆಯಾಗಿ ಇತರ ಧರ್ಮಗಳತ್ತ ವಿಸ್ತರಿಸಬೇಕು, ಅವರು ಮುಸಲ್ಮಾನರ ಕಣ್ಣಿಗೆ ಇಷ್ಟು ಅಸಹನೀಯವಾಗಿ ಕಂಡರೂ ಸಹ, ಅದರಿಂದ ಹಿಂದುಗಳು ಪ್ರತೀಕಾರದ ಭಾವನೆಯನ್ನು ನಿರಾಕರಿಸಬೇಕು.

"ಅವರು ಹಿಂದೂ ಧರ್ಮದಿಂದ ಅಸ್ಪೃಶ್ಯತೆಯನ್ನು ಅಳಿಸಿಹಾಕದಿದ್ದರೆ, ಹಿಂದು ಧರ್ಮವು ಅಳಿಸಲ್ಪಡುತ್ತದೆ ಎಂದು ಗಾಂಧೀಜಿಯವರು ಹಿಂದುಗಳನ್ನು ಎಚ್ಚರಿಸಿದರು".

**ಜನಾರ್ದನರಾವ್ ದೇಸಾಯಿ:**

ಇವರು ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ

ಲ್ ಳು ಥ

ವಲಕಂದಿನ್ನಿಯವರು ವೃತ್ತಿಯಿಂದ ವಕೀಲರಾಗಿದ್ದರು. ನೂತನ ವಿದ್ಯಾಲಯದ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಕ್ರಿ. ಶ. ೧೯೧೯ರಲ್ಲಿ ನಡೆದ ಅಮೃತಸರದ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ಈ ಸಭೆಗೆ ಮಹಾತ್ಮಾ ಗಾಂಧೀಜಿಯವರು ಮೊದಲಬಾರಿಗೆ ಅಧಿವೇಶನಕ್ಕೆ ಬಂದಿದ್ದರು. ಅವರ ದರ್ಶನದಿಂದ ತುಂಬಾ ಪ್ರಭಾವಿತಗೊಂಡರು. ಕ್ರಿ. ಶ. ೧೯೨೧–೨೨ರಲ್ಲಿ ಗುಲಬರ್ಗಾದಲ್ಲಿ ಕರಾಳ ಸ್ವರೂಪದ ಹಿಂದೂ ಮುಸಲ್ಮಾನರ ಗಲಭೆ ನಡೆಯಿತು. ನಿಜಾಂ ಸರಕಾರವು ಇದನ್ನು ಮುಚ್ಚಲು ಪ್ರಯತ್ನ ಮಾಡಿತು. ಆದರೆ ದೇಸಾಯಿ ಹಾಗೂ ಇವರ ಗೆಳೆಯರು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಲೇಖನ ಬರೆದು ಪ್ರಚಾರಗೊಳಿಸಿದರು.

ಕ್ರಿ. ಶ. ೧೯೨೦ರಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರು. ನಂತರ ಕ್ರಿ. ಶ. ೧೯೩೧–೩೨ರಲ್ಲಿ ಇಂಗ್ಲೆಂಡಿನಲ್ಲಿ ದುಂಡು ಮೇಜಿನ ಪರಿಷತ್ತು ನಡೆಯುತ್ತಿದ್ದ ಅವಧಿಯಲ್ಲಿ, ಇವರು ತಮ್ಮ ಗೆಳೆಯನೊಂದಿಗೆ ಹೈದರಾಬಾದಿನಲ್ಲಿ ಖಾದಿ ಪ್ರಚಾರ ವಿದೇಶಿ ಬಟ್ಟೆಗಳ ಬಹಿಷ್ಕಾರವನ್ನು ಭರದಿಂದ ಸಾಗಿಸಿದರು. ಹೈದರಾಬಾದ್ ರಾಜಕೀಯ ಅಧಿವೇಶನಗಳಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ಸಂಸ್ಥೆ ಹಾಗೂ ಕರ್ನಾಟಕ ಪರಿಷತ್‌ಗಳನ್ನು ರಚಿಸುವಲ್ಲಿ ಇವರ ಪಾತ್ರ ಅಗಾಧವಾಗಿದೆ. ಹೈದರಾಬಾದ್ ಕರ್ನಾಟಕ ಚರಕಾ ಸಂಘ, ನರಗುಂದ ಕರ್ನಾಟಕ ಗ್ರಾಮ ಸೇವಾ ಸಂಘಗಳಲ್ಲಿ ಸಕ್ರಿಯ ಸೇವೆ ಸಲ್ಲಿಸಿದ ಪ್ರಮುಖರಲ್ಲಿ ಇವರೂ ಒಬ್ಬರು.

## ಸ್ವಾಮಿ ರಮಾನಂದ ತೀರ್ಥ:

ಮಹಾತ್ಮ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಹೈದ್ರಾಬಾದ್ ಸಂಸ್ಥಾನವನ್ನು ಮುಂದುವರೆಸಬೇಕು ಎಂಬುದನ್ನು ಅರಿತುಕೊಂಡ ಸ್ವಾಮಿ ರಮಾನಂದ ತೀರ್ಥರು ಮುಂದೆ ಬಂದರು. ವೆಂಕಟೇಶ ಎಂಬ ಹೆಸರಿನಿಂದ ಹುಟ್ಟಿದ ರಮಾನಂದ ತೀರ್ಥರ ಮೊದಲ ಹೆಸರು. ಸಿಂದಗಿಯವರೇ ಆಗಿದ್ದರು. ಗಾಂಧಿ ಟೊಪ್ಪಿಗೆ ಶಾಲೆಯಲ್ಲಿ ಹಾಕಿ ನಿರ್ಬಂಧನೆ ಮಾಡಿದಾಗಲೂ ಗಾಂಧಿ ಟೊಪ್ಪಿಗೆ ಧರಿಸಿದರು. ಫಾಲಕ ವಿದ್ಯಾಪೀಠದಿಂದ ಎಂ.ಎ. ಪದವಿ ಪಡೆದರು. ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಸಂಘಟನೆಯ ಅನುಭವ



ಹೊಂದಿದ್ದಾರೆ. ಅವರು ಸನ್ಯಾಸವನ್ನು ಸ್ವೀಕರಿಸಿದರು. ದೇಶ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಅಂಬಾ ಜೋಗಾಯಿಯಲ್ಲಿ ಶ್ರೀ ನೋಗೇಶ್ವರ ನೂತನ ವಿದ್ಯಾಲಯವನ್ನು ಬೆಳೆಸಿದರು. ಕ್ರಿ. ಶ. ೧೯೩೮ರಲ್ಲಿ ಸ್ವಾಮಿ ರಮಾನಂದ ತೀರ್ಥರು ಮೊದಲನೆ ಸತ್ಯಾಗ್ರಹವನ್ನು ಮಾಡಲು ಒಂದು ತಂಡವನ್ನೇ ನಿರ್ಮಿಸಿದರು. ಕ್ರಿ. ಶ. ೧೯೨೭ರಲ್ಲಿ ಕಾರ್ಮಿಕ ಚಳುವಳಿಯಲ್ಲಿ ಮುಂಬೈಯಲ್ಲಿ ಧುಮುಕಿದರು. ಕ್ರಿ. ಶ. ೧೯೩೮ರಲ್ಲಿ ಸತ್ಯಾಗ್ರಹವನ್ನು ಮಾಡಿ ಜೇಲಿಗೆ ಹೋಗುವುದು ಅನಿವಾರ್ಯವಾಗಿತ್ತು. ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು. ಮೂರು ಪರಿಷತ್ತುಗಳನ್ನು ಒಂದುಗೂಡಿಸಿದ ರಮಾನಂದ ತೀರ್ಥರು ಚಳುವಳಿಗೆ ಮುಂದಾಲೋಚನೆಗೆ ಕಾರಣಕರ್ತರಾದರು. ಅವರು ಹೈದ್ರಾಬಾದ್ ಸ್ಟೇಟ್‌ದಲ್ಲಿ ಸುತ್ತಾಡಿ ಜನರನ್ನು ಹುರಿದುಂಬಿಸಿ ವಿಮೋಚನೆಗೆ ಅಹಿಂಸಾವಾದ ಹಾಗೂ ಸತ್ಯಾಗ್ರಹದ ಮೂಲಕವೇ ವಿಮೋಚನೆಗೆ ನಾಂದಿ ಹಾಡಿದ್ದಾರೆ.

## ಅನಂತಶರ್ಮ:

ನಿಜಾಮಶಾಹಿ ವಿರುದ್ಧ ಹೋರಾಟಕ್ಕೆ ಇಳಿದು ಬಂದರು. ಆರ್ಯ ಸಮಾಜದ ಕಾರ್ಯಕರ್ತರಾಗಿದ್ದರು. ಚಿಂಚೋಳಿಯಲ್ಲಿ ಹುಟ್ಟಿದ್ದಾರೆ. ಇವರಿಗೆ ಜಯತೀರ್ಥಾಚಾರ್ಯ ಎಂದೇ ಕರೆಯುತ್ತಾರೆ. ನರೇಂದ್ರ ನಿಕೇತನ ಆಶ್ರಮದ ಸಂಸ್ಥಾಪಕ ಸಂಚಾಲಕರಾಗಿ ಕೆಲಸ ನಿರ್ವಹಿಸಿದ್ದಾರೆ. ಜಾನಾಪುರದಲ್ಲಿ ಈ ಆಶ್ರಮ ಸ್ಥಾಪಿಸಿದರು. ಹುಮನಾಬಾದ ಪಟ್ಟಣಗಳಲ್ಲಿ ರಜಾಕಾರರ ಕೃತ್ಯಗಳನ್ನು ಖಂಡಿಸಿ ಅನಂತಶರ್ಮ ಮುಂದೆ ಬಂದರು. ಕ್ರಿ. ಶ. ೧೯೪೨ ಆಂದೋಲನಕ್ಕೆ ಕರಪತ್ರಗಳನ್ನು ಹಂಚಲು ಅನಂತ ಶರ್ಮರು ಪ್ರಮುಖ ಕೆಲಸ ಮಡಿದ್ದಾರೆ. ಸೋಲಾಪುರ, ಹಲಗಿ, ಬಿಜಾಪುರ, ಕಲಬುರ್ಗಿಯ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ. ಕ್ರಿ. ಶ. ೧೯೪೮ರಲ್ಲಿ ಸಂಪೂರ್ಣ ಕಲಬುರ್ಗಿ ಜಿಲ್ಲೆಯಲ್ಲಿ ಪ್ರವಾಸವನ್ನು ಕೈಗೊಂಡರು. ಆಗ ರಜಾಕಾರರು ನಿಜಾಮ ಪೋಲಿಸ್ ಇವರನ್ನು ಚಿಂಚೋಳಿಯಲ್ಲಿ ಬಂಧಿಸಿಡಲಾಯಿತು.

## ಚನ್ನಬಸಪ್ಪ ಕುಳಗೇರಿ:

ಜೇವರ್ಗಿ ತಾಲೂಕಿನವರು, ಕ್ರಿ. ಶ. ೧೯೪೨ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಪ್ರಭಾವಯುತರಾಗಿದ್ದಾರೆ. ರಜಾಕಾರರ ವಿರುದ್ಧ

ಕುಳಗೇರಿ ಮಾಡಿದ ಹಿಂಸಾತ್ಮಕ ಕೃತ್ಯಗಳನ್ನು ಖಂಡಿಸಲು ಉಗ್ರರೂಪದ ತಂತ್ರ ರೂಪಿಸಿದರು. ಕ್ರಿ. ಶ. ೧೯೪೭ರಲ್ಲಿ ಅರಳಗುಂಡಿಯಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಶರಣಗೌಡ ಕುಳಗೇರಿ, ಕೃಷ್ಣಕುಮಾರ, ವಜ್ರ ಭಗವಾನ್ ನಾಲ್ಕು ಜನರ ವಿರುದ್ಧ ನಿಜಾಮ ಸರ್ಕಾರ ವಾರಂಟ್ ಹೊರಡಿಸಿತು. ಮಾಡಬಾಳ, ದವಳಾರ, ಹೊನ್ನಳ್ಳಿ ಮತ್ತು ಸಿಂದಗಿ ಶಿಬಿರಗಳನ್ನು ಕಟ್ಟಿ ಮುನ್ನಡೆಸಿಕೊಂಡು ಹೋಗುವಲ್ಲಿ ಪ್ರಯತ್ನಿಸಿದರು. ತಹಸೀಲ್ ಕಛೇರಿಯ ಕಾಗದ ಪತ್ರಗಳನ್ನು ಸರ್ಕಾರಿ ಕಡತಗಳನ್ನು ಸುಟ್ಟು ಹಾಕಿದರು. ಗುಪ್ತವಾಗಿ ಕರಪತ್ರ ಹಂಚುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ವಾಗಣಗೇರಿಯಲ್ಲಿ ನಿಜಾಮ ಘೋಷಿಸಿದ ದಾಳಿಯಲ್ಲಿ ಬಸವಂತರಾಯ ತಾಂಬಾ, ಪಂ. ಮಾಣಿಕರಾವ್‌ರು ಗೋಲಿಬಾರನಲ್ಲಿ ಚನ್ನಬಸಪ್ಪ ಕುಳಗೇರಿ ಬಚಾವಾದರು. ಮಳ್ಳಿ ಗ್ರಾಮದಲ್ಲಿ ಲೂಟಿ ನಡೆಯಿತು. ಅದನ್ನು ಕಣ್ಣಾರೆ ಕಂಡಿದ್ದಾರೆ. ಕ್ರಿ. ಶ. ೧೯೪೮ರ ಸೆಪ್ಟೆಂಬರ್ ೧೩ ರಂದು ಮಿಲ್ಟ್ರಿಯಲ್ಲಿ ಸಹಕರಿಸಲು ಕುಳಗೇರಿ ಅವರು ಮುಂದೆ ಇರುತ್ತಿದ್ದರು.

**ನಾರಾಯಣರಾವ್ ಕಾನಿಹಾಳ್:**

ಸಿಂಧನೂರು ತಾಲೂಕಿನ ತುರವಿಹಾಳದವರು, ಕ್ರಿ. ಶ. ೧೯೩೮ರಲ್ಲಿ ನೂತನ ವಿದ್ಯಾಲಯ ಸಂಸ್ಥೆಯ ವಿದ್ಯಾರ್ಥಿಯಾಗಿದ್ದರು. ವಂದೇ ಮಾತರಂ (ಕ್ರಿ. ಶ. ೧೯೩೮)ಗೆ ಸರ್ಕಾರ ಕಡಿವಾಣ ಹಾಕಿತ್ತು. ಕಾಲೇಜನ್ನು ಬಿಟ್ಟು ವಂದೇ ಮಾತರಂ ಚಳುವಳಿಯಲ್ಲಿ ಪಾಲ್ಗೊಂಡರು. ಚಲೇಜಾವ್ ಚಳುವಳಿ (ಕ್ರಿ. ಶ. ೧೯೪೨) ರಾಘವೇಂದ್ರರಾವ್ ಜಹಗೀರದಾರ್ ಅವರ ಆದೇಶದ ಮೇರೆಗೆ ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಯ ಪತ್ರಿಕೆಗಳನ್ನು ಹಂಚುವ ಮೂಲಕ ಚಲೇಜಾವ್ ಚಳುವಳಿಗೆ ಮತ್ತಷ್ಟು ಜಾಗೃತಿ ಮೂಡಿಸುವಲ್ಲಿ ಸಫಲರಾದರು. ಕರ್ನಾಟಕ ಪರಿಷತ್ತಿನ ರಾಜಕೀಯ (ಕ್ರಿ. ಶ. ೧೯೪೫) ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕ್ರಿ. ಶ. ೧೯೪೨ ಆಗಸ್ಟ್ ೨೮ ರಂದು ರಾಜ್ಯದ ಕಾಂಗ್ರೆಸ್ ಮುಖಂಡರು ಬಂಧಿತರಾದರು. ಅದರಲ್ಲಿ ನಾರಾಯಣರಾವ್ ಅವರು ಭೂಗತರಾಗಿ ಹೋರಾಟ ಮಾಡಿ ಮೃಗರಾಜೇಂದ್ರ ಗಗನೆ, ತ್ರಿಲೋಚನ ದೀಕ್ಷಿತ್ ಇವರೊಂದಿಗೆ ಇದ್ದರೆಂದು ಹೇಳುತ್ತಾರೆ. ಆಳಂದ, ಕಲಬುರ್ಗಿ ಭಾಗದ ಭೂಗತರಾದಾಗಲೂ ಭೂಸನೂರಿನ ಭೈರಪ್ಪಗೌಡ ಮನೆ ಕೇಂದ್ರ ಸ್ಥಾನ ಮಾಡಿಕೊಂಡರು. ಹಣ ಸಂಗ್ರಹದಲ್ಲಿ ಇವರ ಪಾತ್ರ ದ್ವಿಗುಣವಾಗಿದೆ.



ಸತ್ಯಾಗ್ರಹದ ಮೂಲಕ ನಿಜಾಮ ಸರ್ಕಾರ ಒಪ್ಪದೇ ಇದ್ದಾಗ ಪ್ರತ್ಯಕ್ಷ ಹೋರಾಟಕ್ಕೆ ಮುಂದಾಗಬೇಕಾದದ್ದು ಅನಿವಾರ್ಯವಾಯಿತು. ದುಧನಿ, ಗೌಡಗಾಂವ್, ಹುಟಗಿಗಳಲ್ಲಿ ಶಿಬಿರಗಳನ್ನು ಸ್ಥಾಪಿಸಿ ಅದರ ಮೂಲಕ ರಜಾಕಾರರ ಹುಟ್ಟನ್ನು ಅಡಗಿಸಿದರು. ಪೋಲಿಸ್ ಚೌಕಿ, ರಜಾಕಾರರ ಅಡ್ಡೆಯ ಮೇಲೆ ದಾಳಿ ಮಾಡಿದರು. ಕರೋಡಗಿರಿ ನಾಗಲೂಟಿ ಗ್ರಾಮದ ಕಾಗದಗಳನ್ನು ಸುಟ್ಟು ಹಾಕಿದರು. ಕಲಬುರ್ಗಿ ಜಿಲ್ಲೆಯ ಬಾರ್ಡರ್ ಶಿಬಿರಗಳ ಮೇಲ್ವಿಚಾರಣೆ ಜಿಲ್ಲಾ ಕಾಂಗ್ರೆಸ್ ಸಮಿತಿ ರಚನೆಗೊಂಡಿತ್ತು. ಕೊಲ್ಲೂರು ಮಲ್ಲಪ್ಪ ಅಧ್ಯಕ್ಷರಾಗಿ ನಾರಾಯಣರಾವ್ ಕಾನಿಹಾಳ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಕಾನಿಹಾಳರು ಇತ್ತೀಚೆಗೆ ನಿಧನ ಹೊಂದಿದರು.

**ವಿದ್ಯಾಧರ ಗುರೂಜಿ:**

ಆರ್ಯ ಸಮಾಜದ ಪ್ರಮುಖ ನೇತಾರರಾಗಿದ್ದರು. ಸಶಸ್ತ್ರ ಹೋರಾಟ ಮಾಡಿದ ವೀರರಲ್ಲಿ ಗುರೂಜಿ ಒಬ್ಬರು. ನಿಜಾಮನ ವಿರುದ್ಧ ಹೋರಾಡಲು ಯುವಕರಿಗೆ ಪ್ರೇರಣೆ ನೀಡಿದರು. ರಾಜದ್ರೋಹಿ ಅಪಾದನೆಯನ್ನು ವಿದ್ಯಾಧರರಿಗೆ ಹೊರಿಸಿದರು. ಕ್ರಿ. ಶ. ೧೯೩೮ರಲ್ಲಿ ಸುಭಾಷ್‌ಚಂದ್ರ ಬೋಸ್ ಅವರ ಪ್ರಭಾವಕ್ಕೆ ಒಳಗಾದರು. ಗಾಂಧಿ, ಜೆಪಿ ಅವರ ಭಾರತ ಬಿಟ್ಟು ತೊಲಗಿರಿ ಚಳುವಳಿಯಿಂದ ಪ್ರಭಾವಿತರಾಗಿ ಅವರಲ್ಲಿ ಪಾಲ್ಗೊಂಡರು. ಕ್ರಿ. ಶ. ೧೯೪೫ರಲ್ಲಿ ಕಲಬುರ್ಗಿಯಲ್ಲಿ ಆರ್ಯ ಸಮಾಜದ ದಂಗೆ ಸಮಾವೇಶ ನಡೆಯಿತು. ನೆಹರೂ ಗಂಜದಲ್ಲಿ ೪ನೆಯ ಆರ್ಯ ಮಹಾಸಮ್ಮೇಳನ ಜರುಗಿತು. ಕ್ರಿ. ಶ. ೧೯೪೬ರಲ್ಲಿ ಇವರ ಕಾರ್ಯ ಚಟುವಟಿಕೆಗಳಲ್ಲಿ ಯಾದಗಿರಿ ಪೋಲಿಸರು ರಾಜದ್ರೋಹಿ ಎಂದು ಆಪಾದನೆ ಮಾಡಿದರು. ಜೀವಂತ ಅಥವಾ ಮೃತದೇಹ ತರಲು ನಿಜಾಮ ಸರ್ಕಾರ ವಾರೆಂಟ್ ಹೊರಡಿಸಿತು. ಆರ್ಯ ಸಮಾಜದ ಚಟುವಟಿಕೆಯಲ್ಲಿ ಭಾಗವಹಿಸಿ ರಜಾಕಾರರ ವಿರುದ್ಧ ಹಲವು ತಂತ್ರ ರೂಪಿಸಲು ಯಶಸ್ವಿಯಾದರು. ಕ್ರಿ. ಶ. ೧೯೪೭ರಲ್ಲಿ ಸರ್ಕಾರ ಪಟೇಲರನ್ನು ಕಾಣಲು ಹೋಗಿ ಒಂದು ನಿಯೋಗವೇ ರಜಾಕಾರರ ನೀತಿಯನ್ನು ವಿವರಿಸಿದವು. ಆಗ ವಿದ್ಯಾಧರ ಗುರೂಜಿ ಇದರ ವೀರ ಯೋಧರಾಗಿದ್ದಾರೆ.

## ರಾ. ಗು. ಜೋಷಿ:

ವಿದೇಶಿ ಬಟ್ಟೆಗಳ ಬಹಿಷ್ಕಾರದ ಕಾಲ, ಈ ಕಾರ್ಯಕ್ಕೆಂದೇ ಮದ್ರಾಸಿನಿಂದ ಮುಂಬೈಗೆ ಗಾಂಧೀಜಿಯವರು ಹೊರಟಿದ್ದರು. ರೈಲು ರಾಯಚೂರಿನ ಮೇಲೆ ಹಾದು ಹೋಗುವುದಿತ್ತು. ಗಾಂಧಿ ದರ್ಶನಕ್ಕೆ ರೈಲ್ವೆ ಸ್ಟೇಷನ್‌ನಲ್ಲಿ ಜನಸಾಗರ ಸೇರಿತ್ತು. ಗಾಂಧೀಜಿಯವರು ಕುಳಿತಿದ್ದ ಡಬ್ಬಿಯಲ್ಲಿ ವಿದೇಶಿ ಬಟ್ಟೆಗಳ ರಾಶಿ, ನೆರೆದ ಜನರೆಲ್ಲರೂ ಆವೇಶದಿಂದ ತಮ್ಮಲ್ಲಿದ್ದ ಪರದೇಶಿ ಬಟ್ಟೆಗಳನ್ನು ಡಬ್ಬಿಯಲ್ಲಿ ಎಸೆಯುತ್ತಿದ್ದರು. ಆಗ ರಾ. ಗು. ಜೋಷಿ ವಿದ್ಯಾರ್ಥಿ ತನ್ನ ತಲೆಯ ಮೇಲಿದ್ದ ಹೊಸ ಫೆಲ್ಟ್‌ಕ್ಯಾಪನ್ನು ಡಬ್ಬಿಯಲ್ಲಿ ಬಿಸಾಡಿದ. ಖಾದಿಯ ಮಹತ್ವ ತಿಳಿದೋ ತಿಳಿಯದೆಯೋ ಜನ ಖಾದಿಗಾಗಿ ಹಪಹಪಿಸಿದರು. ಆದರೆ ರಾಯಚೂರಿನಲ್ಲಿ ಖಾದಿ ದೊರೆಯುತ್ತಿರಲಿಲ್ಲ.

ಆ ಸಮಯದಲ್ಲಿ ರಾ. ಗು. ಜೋಷಿ ಹಾಗೂ ಅವರ ಗೆಳೆಯ ದೊಡ್ಡ ವೀರಣ್ಣ ಮಾಸ್ತರು ಸೇರಿಕೊಂಡು ತಿರುಪುರದಿಂದ ಖಾದಿ ತರಿಸಿ ಪೂರೈಸಿದರು. ವಿಶಿಷ್ಟ ದಿನಗಳಲ್ಲಿ ಖಾದಿ ಹೊತ್ತು ಮನೆಮನೆಗೆ ಹೋಗಿ ಮಾರಾಟ ಮಾಡಿ ಖಾದಿ ಪ್ರಚಾರ ಮಾಡಿದರು. ಅಂದಿನ ದಿನಗಳಲ್ಲಿ ಖಾದಿ ತೊಡುವುದು ಅಪರಾಧವೆಂದೇ ಪರಿಗಣಿಸಲಾಗುತ್ತಿತ್ತು. ರಾ.ಗು. ಜೋಷಿಯವರ ರುಕ್ಮಿಣಿ ಭಂಡಾರ ಮತ್ತು ನೆಹರೂ ಸ್ಟೋರ್ಸ್ ತೆರೆದು ಮಾರಾಟ ಮಾಡುತ್ತಿದ್ದರು.

## ವಿ. ಪಿ. ದೇವಳ್ಗಾಂವಕರ:

ಕಲಬುರ್ಗಿಯ ಹಳೆ ತಲೆಮಾರಿನ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಚಟುವಟಿಕೆಗಳನ್ನು ವಿವರಿಸಬಲ್ಲ ಏಕೈಕ ವ್ಯಕ್ತಿ ಎಂದರೆ ಶ್ರೀ ಭಾವೂಸಾ ದೇವಳ ಗಾಂವಕರರು. ಇವರ ಮನೆ ದೇಶ ಭಕ್ತಿ ಭಾವನೆಗಳ ನೆಲೆಯಾಗಿತ್ತು. ಹೀಗಾಗಿ ದೇವಳಗಾಂವ್ಕರರು ತಮ್ಮ ಚಿಕ್ಕ ವಯಸ್ಸಿನಿಂದಲೇ ವಿವಿಧ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿದ್ದು ಸಹಜ. ಕ್ರಿ. ಶ. ೧೯೨೭ರಲ್ಲಿ ಗಾಂಧೀಜಿಯವರು ಕಲಬುರ್ಗಿಯಲ್ಲಿಯ ನೂತನ ವಿದ್ಯಾಲಯಕ್ಕೆ ಭೇಟಿ ನೀಡಿದ್ದರು. ಅಂದು ಬಾಲಸ್ವಯಂ ಸೇವಕನಾಗಿ ಕಾರ್ಯಮಾಡಿದ ಶ್ರೀಯುತರು ಗಾಂಧೀಜಿಯಯವರನ್ನು ತುಂಬಾ ಹತ್ತಿರದಿಂದ ನೋಡಿದರು. ಹೀಗೆ ಮುಂದೊಮ್ಮೆ ಕ್ರಿ. ಶ. ೧೯೨೯ರಲ್ಲಿ ಗಾಂಧೀಜಿಯನ್ನು



ಕಂಡ ಇವರು, ಕ್ರಿ. ಶ. ೧೯೩೦ರ ದಂಡೀಯಾತ್ರೆಯ ಪ್ರಭಾವದಿಂದ ಖಾದಿಧಾರಿಗಳಾದರು. ಅಂದಿನಿಂದ ಇಂದಿನವರೆಗೂ ಖಾದಿ ಭಕ್ತರಾಗಿಯೇ ಉಳಿದಿದ್ದಾರೆ. ಶ್ರೀಯುತರು ಆಳಂದ ಖಾದಿ ಭಂಡಾರ, ಕಲಬುರ್ಗಿ ಖಾದಿ ಭಂಡಾರ ಹಾಗೂ ರಾಯಚೂರಿನ ಖಾದಿ ಸಂಘಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಹನುಮಂತರಾವ್ ಕಕ್ಕೇರಿ, ಕಪಟರಾಳ ಕೃಷ್ಣರಾವ್‌ರೊಂದಿಗೆ ನಿಕಟ ಸಂಪರ್ಕ ಹೊಂದಿ ರಾಷ್ಟ್ರೀಯ ಕಾರ್ಯಗಳನ್ನು ನಡೆಸಿಕೊಂಡು ಬಂದರು.

## ಜಗನ್ನಾಥರಾವ್ ಚಂದ್ರಿಕೆ:

ಜಗನ್ನಾಥರಾವ್ ಅವರು ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯದಲ್ಲಿ ಧುಮುಕಿದವರು. ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ "ವಂದೇಮಾತರಂ" ಚಳುವಳಿಯಲ್ಲಿ ಭಾಗವಹಿಸಿ, ಸೆರೆಮನೆ ಕಂಡರು. ಹೀಗೆ ಮುಂದಿನ ಎಲ್ಲಾ ರಾಷ್ಟ್ರೀಯ ಆಂದೋಲನ ಹಾಗೂ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಹಿರಿಯರು ಹೈದರಾಬಾದ ವಿಮೋಚನೆ, ಖಾದಿ ಪ್ರಚಾರ ಮುಂತಾದ ಕಾರ್ಯಕ್ರಮಗಳಲ್ಲಿ ಇವರ ಪಾತ್ರ ಅಪಾರ. ವಿಮೋಚನೆಯಾದ ಮೇಲೆ ಸಂಸ್ಥಾನದ ನಡುಗಾಲ ಸರಕಾರದಲ್ಲಿ ನಂತರ ಮೈಸೂರು ಸರಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದರು. ಕಾಮರಾಜರೊಂದಿಗೆ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. ನಂತರ ತಮ್ಮ ಮಿಕ್ಕ ಜೀವನವನ್ನು ಶಿಕ್ಷಣ ಕ್ಷೇತ್ರದಲ್ಲಿ ಅಂದರೆ ನೂತನ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಸ್ವಾಮಿ ರಮಾನಂದ ತೀರ್ಥರ ಸಂಶೋಧನಾ ಕೇಂದ್ರದ ವ್ಯವಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

## ಕಕ್ಕೇರಿ ಹನುಮಂತರಾಯರು:

ಗುಲಬರ್ಗಾದ ವಿವಿಧ ಸಾರ್ವಜನಿಕ ಚಟುವಟಿಕೆಗಳ ಧುರೀಣರೆಂದೇ ಪ್ರಸಿದ್ಧಿ ಪಡೆದ ಶ್ರೀಯುತರು ಕಾಂಗ್ರೆಸ್ ಖಾದಿ ಪ್ರಚಾರ, ಕನ್ನಡದ ಕಾರ್ಯಗಳಲ್ಲಿ ಆಸಕ್ತಿಯಿಂದ ದುಡಿದ ಹಿರಿಯರು. ಸಾಹಿತ್ಯ ಸಮ್ಮೇಳನ, ಸಂಸ್ಥಾ ಕಾಂಗ್ರೆಸ್ ಹಾಗೂ ನಿಜಾಂ ಕರ್ನಾಟಕ ಪರಿಷತ್ ಕಲಬುರ್ಗಿಯ ಕನ್ನಡ ಸಾಹಿತ್ಯ ಮುಂತಾದ ಅನೇಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಇವರ ಪಾತ್ರ ಅಪಾರ.

**ಶ್ರೀ ಪಿ. ವಿ. ಕುಲಕರ್ಣಿ:**

ಇವರು ಗುಲಬರ್ಗಾದ ಸುರಪುರ ತಾಲೂಕಿನ ಕಾಮನೋಟಿಗೆ ಗ್ರಾಮದವರು. ರಾಯಚೂರಿನಲ್ಲಿ ಅಂಬರ ಚರಕಾ ಶಿಕ್ಷಕ ಹುದ್ದೆಯ ತರಬೇತಿ ಪಡೆದು, ಸಂಸ್ಥೆಯ ವಿವಿಧ ಕೇಂದ್ರಗಳಲ್ಲಿ ಉತ್ಪತ್ತಿ ಹಾಗೂ ವಿಕ್ರಯ ಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕೊಪ್ಪಳ ತಾಲೂಕು ಗ್ರಾಮೋದ್ಯೋಗ ಸಂಘದ ಆಜೀವ ಸದಸ್ಯರಾಗಿದ್ದಾರೆ. ಹಲವು ಕಾಲ ಸಂಘದಲ್ಲಿ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಪ್ರಭಾವ ಕಲಬುರಗಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಆಗಿರುವುದು ಕಂಡುಬರುತ್ತದೆ.

❑

## ಆಕರ ಗ್ರಂಥಗಳು


೧. ವಲ್ಲಭಾಯಿ ಪಟೇಲ್ ಜಯಂತಿ ಮಹೋತ್ಸವ – ವಿ. ಐ. ದೇವಳಗಾಂವಕರ.

೨. ಸ್ವಾತಂತ್ರ್ಯೋದಯದ ಮೈಲುಗಲ್ಲುಗಳು – ಎಸ್. ಆರ್. ರಾಮಸ್ವಾಮಿ.

೩. ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು – ಜಿಲ್ಲಾಡಳಿತ ಬೀದರ.

೪. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು – ಡಾ. ಸೂರ್ಯನಾಥ ಕಾಮತ್.

೫. ಆರ್ಯ ಸತ್ಯಾಗ್ರಹ ದರ್ಶನ – ವಂದೇಮಾತರಂ ರಾಮಚಂದ್ರರಾವ.

೬. ಪಾಟೀಲ, ಎಂ. ಬಿ. (ಸಂ) 'ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ.

೭. ಡಾ. ಬಿ. ಸಿ. ಮಹಾಬಲೇಶ್ವರಪ್ಪ, 'ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು.

೮. ಧ್ರುವನಾರಾಯಣ ಎಂ. 'ಹೈದರಾಬಾದ್ ಕರ್ನಾಟಕದಲ್ಲಿನ ಖಾದಿ ಇತಿಹಾಸ'.

೯. ಡಾ. ಸೂರ್ಯನಾಥ ಯು. ಕಾಮತ್, 'ಹೋರಾಟದ ನೆನಪುಗಳು ಸ್ವಾಮಿ ರಮಾನಂದ ತೀರ್ಥ'.

೧೦. The End of an Era – K. M. Munshi.

೧೧. The Indomitable Sardar – K. L. Punjabi.

೧೨. Gandhi : His Life and Thought – J B Kripalani.

೧೩. Freedom at Midnight – Laary Collins and Dominique Lapierre.

೧೪. Fabulous Nizam – D.F. Karaka.

೧೫. The Story of the Integration of the Indian States – V.P. Menon.

❑

# ಅನುಬಂಧ

## ಛಾಯಾಚಿತ್ರಗಳು



REGISTERED NO. M. 97.

The Hindu

MAHATMA GANDHI'S TOUR

ENGAGEMENTS AT GULBARGA

(ASSOCIATED PRESS OF INDIA.)

GULBARGA, Feb. 22.

Mahatma Gandhi arrived here yesterday morn by the Madras Mail from Sholapur and was given a rousing reception at the Station by the Hindus and Mussalmans. The Railway authorities issued over eight hundred platform tickets for those wanting to participate in the reception on the platform.

GANDHIJI'S SPEECH

In the evening he attended a mass meeting of nearly 10,000 people held in front of the temple of the famous Shri Basaveshwar where he was presented with a purse by H. E. H. the Nizam of Rs. [illegible]. Mr. Gandhi made an important and impressive speech in the course of which he emphasised the use of spinning wheel and said it was the only practical and universal programme before the country in which Hindus and Mussalmans, Parsees and Christians [illegible] [illegible]

... delivered in Hindustani drew attention of the students to the necessity of observing brahmacharya (celibacy) during their period of training. He warned them against being misled by [illegible] and [illegible] but highly fascinating and brilliantly written literature that came to them from the West. Gandhiji told the students that he spoke what he knew and after an experience of forty years that brahmacharya was not only possible but absolutely necessary if we were to have vigorous intellect and vigorous bodies. One of the reasons why we have ceased to think originally was this lack of brahmacharya, that is lack of conservation of the precious vital energy. He wanted the students to go in for gymnastics and all healthy athletics, but they would be of no avail if the students did not realise the necessity of retaining their vital energy by leading pure, straight and disciplined lives. He asked them to acquire knowledge of Hindi. It was necessary and useful in communicating with the masses of India. He exhorted them to wear Khadi.

A MASS MEETING

Gandhiji then attended a mass meeting of the citizens of [illegible] where he received a purse of Rs. [illegible]. In the course of his speech he emphasised the use of the spinning wheel and the use of Khadi. [illegible]

ಗಾಂಧೀಜಿಯವರು ಕಲಬುರಗಿ ಭೇಟಿಕೊಟ್ಟ ವಿಷಯ ದಿ ಹಿಂದು (ಆಂಗ್ಲ) ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವುದು



ಶ್ರೀ ಸರದಾರ ಶರಣಗೌಡ ಇನಾಮದಾರ



ಹೋರಾಟಗಾರರ ಮಹಾಮೇಳದಲ್ಲಿ





ಶ್ರೀ ಸರದಾರ ಶರಣಗೌಡ
ಇನಾಮದಾರ ದಂಪತಿಗಳು



ಗಾಂಧಿಜಿಯವರು ಕಲಬುರಗಿಯ ನೂತನ ವಿದ್ಯಾಲಯ ಸಂಸ್ಥೆಯ
ಆವರಣದಲ್ಲಿ ಸ್ಥಳೀಯ ಹೋರಾಟಗಾರರೊಂದಿಗೆ ಚರ್ಚಿಸಿದ ಸ್ಥಳ



ಕಲಬುರಗಿಯಲ್ಲಿ ಶರಣಗೌಡರ ವೃತ್ತದ ಅಡಿಗಲ್ಲು ಸಮಾರಂಭದಲ್ಲಿ ಪೂಜ್ಯ
ಶರಣಬಸವೇಶ್ವರ ಪೀಠಾಧಿಪತಿಗಳೊಂದಿಗೆ



**ವಿಮೋಚನಾ ಹೋರಾಟದ ಮುಂಚೂಣಿಯಲ್ಲಿ ಗೌಡರು**



**ಸ್ವಾಮಿ ರಮಾನಂದ ತೀರ್ಥರು**





**ವ್ಹಿ.ಪಿ. ದೇವಳಗಾಂವಕರ್**



**ವಿದ್ಯಾಧರ ಗುರೂಜಿ**



**ಚಂದ್ರಶೇಖರ ಪಾಟೀಲ ಮಹಾಗಾಂವ**





**ಗಾಂಧಿಜಿಯವರು ಕಲಬುರಗಿಯ ಶ್ರೀ ಶರಣಬಸವೇಶ್ವರ ದೇವಸ್ಥಾನ ಹಾಗೂ ದಾಸೋಹ ಮಹಾಮನೆಗೆ ಭೇಟಿ ನೀಡಿ ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪಾ ಅವರೊಂದಿಗೆ ಮಾತಕತೆ ನಡೆಸಿದ ಸಂದರ್ಭ**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |